ಕೆನರಾ ಬ್ಯಾಂಕಿನ ಪ್ರಕಟಣೆ

ಕೆನರಾ ಬ್ಯಾಂಕಿನ ಚಿಕ್ಕದೊಂದು ಚರಿತ್ರೆ

'ಕೆನರಾ ಬೇಂಕ್ ಲಿಮಿಟೆಡ್' ಎಂಬ ಈ ಸಂಸ್ಥೆಯು ೧೯೦೬ನೇ ಇಸವಿ ಜುಲ್ಯಾ ತಾರೀಕು ೧೭ರಲ್ಲು ಪ್ರಥಮತಃ ಜನ್ಮ ವೆತ್ತಿತು. ಆಗ್ಯೆ ಒಂದು ಎದೇಶಿ ಬೇಂಕು ಅತಿಶಯ ಬಡ್ಡಿಯನ್ನು ಠೇವಣಿಗರಿಗೆ ಕೊಟ್ಟು ಸಂಸ್ಥಾನದ ಯಾವತ್ತೂ ಧನ ಸಂಗ್ರಹವನ್ನು ತನ್ನ ಕೈಯೊಳಗೆ ಇರಿಸಿ ಕೊಂಡು, ಮುರಿದು ಬಿದ್ದುದರಿಂದ ಜಿಲ್ಲೆಯಲ್ಲಿ ಎಲ್ಲೆಲ್ಲಿಯೂ "ಹಾಹಾ"ಕಾರವು ಎದ್ದು ಮಧ್ಯಮ ತರಗತಿಯವರಿಗೆ ಹೇಳಲಸದ ಕಷ್ಟನಷ್ಟಗಳು ಸಂಭವಿಸಿದುವು. ಇದರಿಂದಾಗಿ ಅಂದಿನ ನಮ್ಮ ಜಿಲ್ಲೆಯ ಮುಖಂಡರೆಲ್ಲ ಕೂಡಿ ಕೆಲವು ನಿಶ್ಚಿತ ವ್ಯವಹಾರ ನೀತಿಯಿಂದೊಡಗೂಡಿದ ಜಿಲ್ಲೆಯದಾದ್ದೇ ಒಂದು ಬೇಂಕನ್ನು ಸ್ಥಾಪಿಸಬೇಕಾಗಿ ಎಣಿಸಿದರ ಫಲವಾಗಿ ಈ ಬೇಂಕು ಅಂದು ತನ್ನ ಕಾರ್ಯ ಕ್ರಮಕ್ಕೆ ತೊಡಗಿತು.

ಇದರ ಮೊದಲನೇ ನಿಶ್ಚಿತಾರ್ಥವೆಂದರೆ, ಠೇವಣಿಗರ ಹಣಗಳ ಭದ್ರತೆ. ಈ ಧ್ಯೇಯವನ್ನು ಮನಗಂಡು, ಬೇಂಕಿನ ವರ್ಷಾವಧಿ ಮುನಾಫೆಯ ಶೇ॥ ೨೫ರ ಅಂಶವನ್ನು ಆಪದ್ಧನ ರೂಪದಿಂದ ಒಟ್ಟುಗೂಡಿಸುತ್ತಾ ಬಂದು, ಭಾವೀ ನಷ್ಟಗಳನ್ನು ಆದರಿಸಲೋಸುಗ ಒಂದು ಕ್ಷೇಮ ನಿಧಿಯನ್ನು ನಿರ್ಮಾಣಮಾಡಬೇಕೆಂಬುದೇ ಮೊತ್ತ ಮೊದಲಿನಿಂದಲೂ, ನಿಬಂಧನೆಯಾಗಿದ್ದು, ಇಂದು ಕೂಡಾ ೩೫ ವರ್ಷಗಳು ಸಂದು ಹೋದರೂ ಈ ನಿಬಂಧನೆಯು ಜಾರಿಯಲ್ಲಿದೆ. ಆದರಿಂದಾಗಿ ಅಂದು ೧೯೦೬ರಲ್ಲಿ ತೊಡಗಿದ ಈ ಕ್ಷೇಮ ನಿಧಿಯು ಇಂದು ೧೯೪೧ರಲ್ಲಿ ಮೂಲ ಧನಕ್ಕಿಂತ ಎಕ್ಕಿರುತ್ತದೆ. ಎರಡನೇ ಧ್ಯೇಯವೆಂದರೆ ಬೇಂಕಿನ ಯಾವತ್ತು ಮೊತ್ತವನ್ನು ಸಾಧ್ಯವಾದಷ್ಟು ದ್ರವ ರೂಪದಲ್ಲಿರಿಸುವುದೇ—ಅಂದರೆ ಯಾವ ಸಂದರ್ಭದಲ್ಲಿಯೂ ಮಾರ್ಪಡಿಸಬಹುದಾದ ಸರಕಾರಿ ಸಾಲ ಪತ್ರಗಳನ್ನು ಬೇಂಕು ಪಡಕೊಳ್ಳಬೇಕೆಂಬುದೇ ಮೊದಲನೇ ಆದರ್ಶದಂತೆ ಈ ಎರಡನೇ ಧ್ಯೇಯವೂ ಇಂದು ಬೇಂಕಿನ ಆಡಳಿತೆ ಮಂಡಳಿಯವರಿಗೆ ಮಾನ್ಯವಿದೆ. ಅದರ ಫಲಿತಾಂಶವಾಗಿ ಬೇಂಕಿನ ಪರಿಮಾಣಕ್ಕನುಗುಣವಾದ ಮೊತ್ತವು ಸರಕಾರಿ ಸಾಲಪತ್ರಗಳಲ್ಲಿದೆ. ಮೂರನೇ ಧ್ಯೇಯವೆಂದರೆ—ಲಾಭದ ದುರಭಿಲಾಷೆಯಿಂದ ಅತಿರೇಕ ಬಡ್ಡಿ ದರವನ್ನು ಸಾಲಪಡೆಕೊಳ್ಳುವ ವ್ಯಾಪಾರಿ ಮುಂತಾದ ಉದ್ಯಮಿಗಳ ಮೇಲೆ ಹೊರಿಸದೆ ಇರುವುದು. ಇದಕ್ಕನುಗುಣವಾಗಿ ಹತ್ತರ ಸಲೆಗೆ ಎಕ್ಕಿದ ಬಡ್ಡಿಯನ್ನು ಎಂದೂ ಬೇಂಕನವರು ಎತ್ತಲಾಗದೆಂಬ ನಿಬಂಧನೆಯು ಇಂದೂ ಜಾರಿಯಲ್ಲಿದೆ. ಆದರೂ ಇಂದಿನ ವಾಣಿಜ್ಯ ಕಾರ್ಯಕ್ಷೇತ್ರದ ಪರಿಸ್ಥಿತಿಗೆ ಸರಿಯಾಗಿ ಹತ್ತರ ಬದಲಾಗಿ ಐದರ ಸಲೆಯ ಬಡ್ಡಿಯಿಂದಲೂ ಈ ಬೇಂಕು ಸಾಲ ಕೊಡುತ್ತಿರುವುದು.

ಪ್ರಾರಂಭದಲ್ಲಿ, ಈ ಬೇಂಕಿನ ಮೂಲಧನವು ಬರೇ ಅರ್ಧ ಲಕ್ಷ ರೂಪ್ಯಾಗಳಷ್ಟು: ಪ್ರಥಮ ವರುಷದಲ್ಲಿಯೇ ಠೇವಣಾತಿಗಳು ರೂಪ್ಯಾ ೪೦,೦೦೦/- ದಷ್ಟಕ್ಕೆ ಬಂದವು. ಇದೇ ರೀತಿ ವರ್ಷಂಪ್ರತಿ ಠೇವಣಾತಿಗಳು ಯಾವ ಪರಿಮಾಣದಲ್ಲಿ ವೃದ್ಧಿಯಾದುವೆಂಬುದಕ್ಕೆ ಈ ಕೆಳಗಿನ ಪುರೋವೃದ್ಧಿ ಕೋಷ್ಟಕವು ಸಾಕ್ಷಿ ಭೂತವಾಗುವುದು.

ವರ್ಷ	ನಂತಿಗೆ ಹಾಕಲ್ಪಟ್ಟ ಮೂಲ ಧನ	ತೆತ್ತ ಮೂಲ ಧನ	ಕ್ಷೇಮ ನಿಧಿ	ಠೇವಣಾತಿ	ವಹಿವಾಟದ ಮೊತ್ತ
1916	2,25,000	2,00,000	89,000	3,60,000	6,83,000
1920	3,00,000	3,00,000	1,61,000	8,99,000	14,19,000
1924	3,00,000	3,00,000	2,62,000	18,10,000	24,69,000
1928	3,00,000	3,00,000	3,88,000	37,42,000	46,99,000
1932	6,00,000	3,30,000	4,31,000	55,46,000	65,62,000
1936	6,00,000	3,33,000	4,50,000	79,64,000	97,25,000
1940	6,00,000	3,92,550	4,50,000	86,71,700	1,03,44,450

ಪ್ರಥಮದ ಎರಡು ದಶಕಗಳಲ್ಲಿ ಠೇವಣಿಗಳು ಅತೀ ತೀವ್ರಗತಿಯಿಂದ ವರ್ಧಿಸಿದರೂ, ಬೇಂಕಿನ ಶಾಖೆಗಳೆಂದೂ ತೆರೆಯಲ್ಪಡಲಿಲ್ಲ.

ತುಂಬಾ ಠೇವಣಾತಿಗಳುಳ್ಳ ಒಂದು ಬೇಂಕು ಭದ್ರವಾದ ಸಾಧನಗಳ ಮೇಲೆಯೇ ಸಾಲಕೊಡಬೇಕೆಂದಿದ್ದರೆ ಪರಿಮಿತ ಕ್ಷೇತ್ರಫಲದಲ್ಲೇ ಉದ್ಯಮಿಸುವದು ಸಾಧ್ಯವಲ್ಲ. ಕೆಲವೆಡೆಯಲ್ಲಿ ಅದರ ಶಾಖೆಗಳನ್ನು ತೆರೆದು, ಹಲವು ವಿಧದ ಭದ್ರತೆಗಳ ಮೇಲೂ, ವಿಧವಿಧದ ಜನತೆಗಳ ಸಹಕಾರದಿಂದಲೂ ಅಂಥಾದ್ದೊಂದು ಬೇಂಕು ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸುವದು ಸ್ವಾಭಾವಿಕವಾದೊಂದು ಹವಣಿಕೆ. ಇದರಂತೆ ಕೆನರಾ ಬೇಂಕು ತನ್ನ ಪ್ರಥಮ ಶಾಖೆಯನ್ನು 1926ರಲ್ಲಿ ಈ ಜಿಲ್ಲೆಯಲ್ಲಿ ಕಾರ್ಕಳದಲ್ಲಿ ತೆರೆಯಿತು. ಆ ತರುವಾಯ ಪರಂಪರೆಯಿಂದ ಪ್ರತಿ ವರುಷವೆಂಬಂತೆ ಶಾಖೆಗಳನ್ನು ತೆರೆದು ಬಂದು ಇಂದಿಗೆ ಈ ಬೇಂಕಿನ 37 ಶಾಖೆಗಳು ನಮ್ಮ ಈ ಭಾರತ ವರ್ಷದ ಪಶ್ಚಿಮ ಕರಾವಳಿಯ ಎಲ್ಲಾ ದೇವುಗಳಲ್ಲಿಯೂ, ನೆರೆಹೊರಾದ ಮೈಸೂರು ಮತ್ತು ಕರ್ನಾಟಕದ ಪ್ರಮುಖ್ಯ ನಗರಗಳಲ್ಲೂ ಸ್ಥಾಪಿತವಾಗಿವೆ.



ಮುಖ್ಯ ಕಾರ್ಯಾಲಯ,—ಲ್ಯಾಟ್ ಹೌಸ್ ಹಿಲ್, ಮಂಗಳೂರು.

ಪ್ರತಿಯೊಂದು ಹೊಸ ಶಾಖೆಯ ಸ್ಥಾಪನಾ ಖರ್ಚನ್ನು ಅದೇ ವರ್ಷದ ಮುನಾಫೆಯಿಂದ ವಜಾಪಡಿಸುವ ನಿಪುಣ ನೀತಿಯನ್ನು ಈ ಬೇಂಕು ಇಂದೂ ಏನೊಂದೂ ಕುಂದಿಲ್ಲದೆ ಅನುಸರಿಸುತ್ತದೆ. ಇದರ ಫಲವಾಗಿ ಯಾವದೊಂದೂ ವರ್ಷದ ಸಾಲಮೂಲಗಳ ಪಟ್ಟಿಯಲ್ಲಿ (Balance Sheet) ಬ್ರೆಂಚ್ ಸ್ಥಾಪನಾ ಖರ್ಚು ಎಂಬ ನ್ಯೂನವನ್ನು ಯಾರೂ ಕಂಡಿಲ್ಲ.

ಬರೇ ಹದಿಮೂರು ವರ್ಷಗಳ ಹಿಂದೆ ಈ ಬೇಂಕು ಆಗಿನ ವಾಡಿಕೆಯಂತೆ ತನ್ನ ಗಿರಾಕಿಗಳಲ್ಲಿ ಮುಕ್ಕಾಲು ಪಾಲಿನವರಿಗೆ ಬರೇ ಪ್ರೋನೋಟುಗಳ ಮೇಲೆ ಮೈಸಾಲಗಳನ್ನು ಕೊಡುತಿತ್ತು. ಆದರೆ ಇದರ ಫಲವಾಗಿ ಯಾವದೊಂದೂ ವರ್ಷದ ಸಾಲಮೂಲಗಳ ಪಟ್ಟಿಯಲ್ಲಿ

ಬ್ಯಾಂಕಿನ ಪ್ರೆಸಿಡೆಂಟರಾದ
ಶ್ರೀ ಎ. ಶ್ರೀನಿವಾಸ ಪೈ, ಬಿ. ಎ., ಬಿ. ಎಲ್.

1929ನೇ ಆರ್ಥಿಕ ಮುಗ್ಗಟ್ಟು ತಲೆದೋರಿದಂದಿನಿಂದ ಈ ಕಾರ್ಯ ಕ್ರಮವನ್ನು ಬದಲಾಯಿಸಿತು. ಇಂದು ಈ ಬೇಂಕಿಗೆ ಹೊರಗಿನಿಂದ ಬರತಕ್ಕ ಸಾಲಗಳನ್ನು ವಿಮರ್ಶಿಸಿದಲ್ಲಿ ಅಂಥಾ ಮೈಸಾಲಗಳು ಬರೇ ಕಾಲಾಂಶಕ್ಕಿಂತ ಕಡಿಮೆ ಇದ್ದು ಉಳಿದ ಮುಕ್ಕಾಲಾಂಶ ಸಾಲಗಳು ಚಿನ್ನಾಭರಣಗಳು, ಸರಕು ಜೀನಸುಗಳು, ಹೊಲಗದ್ದೆಗಳು ಮುಂತಾದ ನಿಶ್ಚಿತ ಭದ್ರತೆಗಳ ಮೇಲೆ ಕೊಟ್ಟ ವುಗಳಾಗಿವೆ. ಆದರೆ ಈ ಬದಲಾವಣೆಯನ್ನು ತಂದೊಡ್ಡಲು ಬೇಂಕು ಅದರ ಬಡ್ಡಿಯ ದರವನ್ನು ಶೇಕಡಾ 10ರ ದರಮಾನದಿಂದ ಕೆಳಗಿಳಿಸಿ, ಅದರ ಫಲಿತಾಂಶವಾಗಿ ಠೇವಣಿಗಳ ಬಡ್ಡಿಯನ್ನೂ ಕಡಿಮೆಮಾಡಬೇಕಾಯಿತು. ಹೀಗಾಗಿ ಪ್ರಾರಂಭದಲ್ಲಿ ಎಣಿಸಿದ ಠೇವಣಿಗಳ ಏಳರ ಸಲೆಯ ಬಡ್ಡಿಯು ಇಂದು ಮೂರರ ಸಲೆಯಾದಂತೆ, ಸಾಲಗಳ ಮೇಲಿದ್ದ 10 ಸಲೆಯ ಬಡ್ಡಿಯು ಇಂದು ಐದರ ಸಲೆಯಂತೆ ನಡೆಯುತ್ತದೆ. ಅಂತೆಯೇ ಅರ್ಧಕ್ಕರ್ಧ ಬಡ್ಡಿಯ ಇಳಿತವಾದರೂ, ಈ ಬೇಂಕಿನ ಠೇವಣಾತಿದಾರರು ತಮ್ಮ ಹಣಗಳನ್ನು ಇನ್ನಷ್ಟು ಹೆಚ್ಚಿಗೆ ಈ ಬೇಂಕಿನಲ್ಲಿ ಡಿವೊಜಿಟು ಮಾಡುವುದು ಈ ಪೋಷಕ ವರ್ಗದ ಉದಾರ ಬುದ್ಧಿಯ ಮತ್ತು ವಿಶಾಲ ದೃಷ್ಟಿಯ ಸೂಚಕಗಳಾಗಿವೆ. ಅದರಿಂದಾಗಿ ಪ್ರಾರಂಭದ ಬರೇ ಒಂದು ಲಕ್ಷ ರೂಪಾಯಿ ಮೊತ್ತವಿದ್ದ ಈ ಬೇಂಕು ಇಂದು ತನ್ನ ದ್ರವ್ಯ ಸಂಚಯವನ್ನು ಒಂದು ಕೋಟಿಗೆ ಮಿಕ್ಕಿ ವೃದ್ಧಿಸಿದೆ.

ಕಾಲಚಕ್ರವು ಒಂದೇ ಗತಿಯಿಂದ ತಿರುಗುವುದಿಲ್ಲ. ತನ್ನ ೩೫ನೇ ವಯದ

(೧೭ನೇ ಪುಟಕ್ಕೆ ಮುಂದುವರಿಸಿಯದೆ)

Greetings

The Directors, Officers and Staff of the CANARA BANK LIMITED join in sending you this message of appreciation for your good will and patronage during the last year. We sincerely wish you a

Happy & Prosperous New Year.

ESTD: 1906

CANARA BANK LIMITED

ಬ್ಯಾಂಕಿನಿಂದ ಸಾಲ ಪಡಕೊಳ್ಳುವದು

By: Sri. B. M. Narsimha Kamath, B. A., C. A. I. I. B.

ಬ್ಯಾಂಕಿನಿಂದ ಹಣವನ್ನು ಪಡಕೊಳ್ಳುವದು ದುಸ್ಸಹವೆಂದೇ ಕೆಲವರ ಭಾವನೆ. ಅಂತಹ ಈ ಮಹನೀಯರು ಸ್ವಕೀಯವಾದ ತಮ್ಮ ಬಂಡವಾಳದ ಚಲನೆಯಿಂದ ಹೊರಡುವ ಉತ್ಪತ್ತಿಯಲ್ಲಿಯೇ ತೃಪ್ತಿಯನ್ನು ಕಾಣುವರು. ಯಾವದೊಂದು ವಿಧದಲ್ಲಿಯೂ ಸಾಲವನ್ನು ಪಡಕೊಳ್ಳದೆ ತಮಗೆ ಸಾಧ್ಯವಿದ್ದಷ್ಟೆ ವ್ಯಾಪಾರವನ್ನು ನಡೆಯಿಸಿ ಸಿಕ್ಕಿದ ಲಾಭವನ್ನು ಅನುಭವಿಸುವದು ನೀತಿ ಮಾರ್ಗವೆಂದು ತೋರಬಹುದು. ಅಂತೂ ಈ ಕಲ್ಪನೆಯು ಧೃಡವಲ್ಲ. ಯಾಕಂದರೆ ಸಾಧಾರಣವಾಗಿ ಪ್ರತಿಯೊಂದು ವ್ಯಾಪಾರದ ಪರಿಸ್ಥಿತಿಯು ಹೇಗೆಂದರೆ–ಅದರಲ್ಲಿ ಹಾಕಿರುವ ಬಂಡವಾಳವನ್ನು ತುಸು ಮಾತ್ರ ಹೆಚ್ಚಿಸುವದರಿಂದ ಲಾಭಾಂಶದಲ್ಲಿ ವಿಶೇಷವಾದ ಅಭಿವೃದ್ಧಿ ಕಾಣುವಂತಹ ಸುಸಂದರ್ಭಗಳು ಆಗಿಂದಾಗ್ಗೆ ಒದಗುವವು. ಈ ಮಾತುಗಳು ಸಾಧಾರಣ ವ್ಯಾಪಾರಿಗಳಿಗೆ ಸಂಬಂಧಿಸುವದಾಗಿರುತ್ತವಲ್ಲದೆ ಅಪಾರ ಬಂಡವಾಳವಿದ್ದವರಿಗಲ್ಲ.

ಹಲವು ವೇಳೆ ವ್ಯಾಪಾರಸ್ಥರು ಕಾಲಕ್ಕನುಸರಿಸಿ ಮ್ಹಾಲನ್ನು ಅಧಿಕವಾಗಿ ದಾಸ್ತಾನು ಮಾಡುವದು ಅವಶ್ಯಕವಾಗುವದು. ಅಂಥ ಸಂದರ್ಭಗಳಲ್ಲಿ ಬ್ಯಾಂಕಿನಿಂದ ಸಹಾಯವನ್ನು ಪಡೆಯಲು ಹಿಂಜರಿಯುವದು ಅಸಾಧ್ಯವಾದರೂ ಕೆಲವರಿಗೆ ಶ್ಲಾಘನೀಯವೆಂದೆನಿಸಬಹುದು. ಇದು ಕೇವಲ ಮೂಢ ಭಾವನೆಯೆ ಸರಿ.

ಮೇಲ್ಕಂಡ ರೀತಿಯಲ್ಲಿ ಬ್ಯಾಂಕಿನ ದ್ರವ್ಯ ಸಹಾಯವನ್ನು ಅವಲಂಬಿಸುವದು ಅನುಚಿತವೆಂದು ತಿಳಿಯುವವರು ಎರಳವಾಗಿರುವದೇನೊ ಬ್ಯಾಂಕಿನವರ ಅದೃಷ್ಟ ಫಲವೆಂದೇ ಹೇಳಬಹುದು. ಅಂತೂ ಪ್ರತಿಯೊಬ್ಬನೂ ಆ ರೀತಿ ಬ್ಯಾಂಕಿನ ಪ್ರಯೋಜನವನ್ನನುಭವಿಸದೆ ಇರುವಂತಿದ್ದರೆ ವ್ಯಾಪಾರ ಮಂಡಲದಲ್ಲಿ ಬ್ಯಾಂಕುಗಳಿಗೆ ಸ್ಥಾನವೆ ದೊರಕುವದಿದ್ದಿಲ್ಲ.

"ಬ್ಯಾಂಕುಗಳನ್ನು ಯಾವ ಸಂದರ್ಭದಲ್ಲಿ ಆಶ್ರಯಿಸಬಹುದು? ಮತ್ತೆಷ್ಟರ ಮಟ್ಟಿಗೆ?" ಎಂಬೀ ಪ್ರಶ್ನೆಯನ್ನು ನಾವೀಗ ಯೋಚಿಸಿ ನೋಡುವ. ಈ ಪ್ರಶ್ನೆಯ ಉತ್ತರವು ವ್ಯಾಪಾರಸ್ಥನಿಗೂ, ವ್ಯಾಪಾರಕ್ಕೂ ಅನುಗುಣವಾಗಿ ಬಹು ವಿಧವಾಗಿರುವದು. ಒಂದೇ ವಿಧದ ವ್ಯಾಪಾರ,—ಒಂದೇ ಸ್ಥಳ,–ಇತ್ಯಾದಿ ಕಾರಣಗಳಿಂದ ಇಬ್ಬರ ವ್ಯಾಪಾರವು ಒಂದೇ ಸಮನಾಗಿದ್ದರೂ ವ್ಯಕ್ತಿ ಬೇಧವೆ ಅವರಿಬ್ಬರ ಪರಿಸ್ಥಿತಿಯಲ್ಲಿ ತಾರತಮ್ಯವನ್ನುಂಟುಮಾಡುವದು. ಹ್ಯಾಗಂದರೆ–ದೈವವಶಾತ್ ಒಬ್ಬನ ವ್ಯಾಪಾರದಲ್ಲಿ ಮಾರಾಟವು ಅಲ್ಪವಾಯಿತೆಂದರೆ ಬ್ಯಾಂಕಿನ ಸಹಾಯವು ಅವನಿಗೆ ಅಗತ್ಯವೆಂದೆನಿಸಲಾರದು. ಹಾಗೆಯೆ ಇನ್ನೊಬ್ಬನು ಚಾತುರ್ಯಬಲದಿಂದ ತನ್ನ ವ್ಯಾಪಾರವನ್ನೂ, ವಹಿವಾಟನ್ನೂ ಹೆಚ್ಚಿಸಿದನೆಂದರೆ ಆತನಿಗೆ ಬ್ಯಾಂಕಿನ ಸಹಾಯವು ಕಿಂಚಿತ್ತಾದರೂ ಅಗತ್ಯವೆನ್ನದೆ ಇರಲಾರದು.

ಹೀಗೆ ಬ್ಯಾಂಕಿನಿಂದ ಹಣವನ್ನು ಕೊಂಡುಕೊಳ್ಳುವದರಲ್ಲಿ ಆತನು ಅವಶ್ಯವಾಗಿ ತಿಳಿಯಬೇಕಾದ್ದೇನೆಂದರೆ—ಈ ಸಾಲ ಪಡಕೊಂಡ ಹಣವನ್ನು ರವಷ್ಟಾದರೂ ಸ್ಥಿರಸೊತ್ತುಗಳಲ್ಲಾಗಲಿ, ಸ್ಥಿರ ಬಂಡದಲ್ಲಾಗಲೀ ಬಂಡವಾಳ ಹಾಕಲಾಗದು. ಯಾಕಂದರೆ ಹೀಗೆ ಬಂಡವಾಳ ಹಾಕಿದ ಹಣವನ್ನು ಅವಶ್ಯ ವಿದ್ದಾಗ ಮಾರ್ಪಡಿಸುವದು ವ್ಯಾಪಾರಕ್ಕೆ ಹಾನಿಕರವಾಗಿರುವದು. ಮತ್ತೊಂದು ವಿಷಯವೇನೆಂದರೆ:—ವ್ಯಾಪಾರಸ್ಥರು ಬ್ಯಾಂಕಿನಿಂದ ಸಾಲವನ್ನು ಪಡಕೊಳ್ಳಬೇಕಾದರೆ ಮುಂಚಿತವಾಗಿ ತಾವು ಸ್ವತಃ ವ್ಯಾಪಾರದಲ್ಲಿ ಹಾಕಿದ ಬಂಡವಾಳದ ಉತ್ಪತ್ತಿಯು ಸ್ಥಿರವೆಂದೂ, ಯೋಗ್ಯವೆಂದೂ ನಿರ್ಧಾರ ಮಾಡಿಕೊಳ್ಳಬೇಕು. ಸಾಧಾರಣವಾಗಿ ಶೇಕಡಾ ೧೦ರಿಂದ ೧೫ರ ವರೆಗೆ ದೊರಕುವ ಪ್ರತಿಫಲವು ಯೋಗ್ಯವೆಂದು ತಿಳಿಯಬಹುದು. ತಮ್ಮ ಬಂಡವಾಳದ ಮೇಲೆ ಈ ಪ್ರತಿಫಲವು ದೊರಕಿತೆಂದರೆ ವ್ಯಾಪಾರಸ್ಥರು ಬ್ಯಾಂಕಿನಿಂದ ಕಿಂಚಿತ್ ಸಹಾಯವನ್ನು ಪಡೆಯಲು ಅರ್ಹರಾಗಿರುವರು. ಬಂಡವಾಳದ ಮೊತ್ತವು ಹೆಚ್ಚುವಾಗ ಲಾಭಾಂಶವು ಹೆಚ್ಚುವದೇ ಸರಿ; ಮಾತ್ರವಲ್ಲ, ಅಧಿಕ್ಯವಾದ ಮೊತ್ತದ ಮೇಲೆ ಸಿಗುವ ಲಾಭವು ಪೂರ್ಣ ಬಂಡವಾಳವು ಮಿತಿ ಸೇರುವ ತನಕ ಹೆಚ್ಚುತ್ತ ಹೋಗುವದು. ಇದನ್ನು ಅರ್ಥ ಶಾಸ್ತ್ರದ ಆಧಾರದಿಂದ ತಿಳಿಯಬಹುದಾಗಿದೆ. ಈ ಕೆಳಗಿನ ಉದಾಹರಣೆಯು ಇದನ್ನು ಇನ್ನೂ ಸ್ಪಷ್ಟಗೊಳಿಸುವದು:—

ತಾವು ಒಂದು ವ್ಯಾಪಾರದಲ್ಲಿ ಒಂದು ಸಾವಿರ ರೂಪಾಯಿಗಳನ್ನು ಬಂಡವಾಳ ಹಾಕಿದ್ದೀರೆಂದು ಒಪ್ಪಿಕೊಳ್ಳುವಾ. ಅದರಲ್ಲಿ ತಮಗೆ ಶೇಕಡಾ ೧೦ರಂತೆ ಪ್ರತಿಫಲ ದೊರಕುತ್ತದೆ. ನೀವು ಇದೇ ನಿಮ್ಮ ಬಂಡವಾಳಕ್ಕೆ ರೂಪಾಯಿ ೧೦೦ನ್ನು ಕೂಡಿಸಿದಿರೆಂದರೆ ಈ ಕೂಡಿಸಿದ ೧೦೦ ರೂಪಾಯಿಗಳ ಮೇಲೆ ತಮಗೆ ದೊರಕುವ ಪ್ರತಿಫಲವು ಶೇಕಡಾ ೧೦ಕ್ಕಿಂತ ಜಾಸ್ತಿಯೇ ಸರಿ. ಇನ್ನೊಮ್ಮೆ ತಾವು ತಮ್ಮ ಬಂಡವಾಳವನ್ನು ರೂ. ೧೦೦ಕ್ಕೆ ಹೆಚ್ಚಿಸಿದರೆ ತಮಗೆ ಈ ನೂರು ರೂಪಾಯಿಗಳ ಮೇಲೆ ಸಿಗುವ ಲಾಭವು ಮುಂಚಿನ ನೂರು ರೂಪಾಯಿಗಳಿಗಿಂತಲೂ ಅಧಿಕತರವಾಗುವದು. ಹೀಗೆ ಹೆಚ್ಚುತ್ತಾ ಹೋಗುವ ಲಾಭಾಂಶಕ್ಕೆ ಒಂದು ಮಿತಿ ಇರುವದು. ಇದೇ ವ್ಯಾಪಾರಕ್ಕೆ ಸಾಕಷ್ಟೆನಿಸುವ ಬಂಡವಾಳದ ಮಿತಿ. ಆಂಗ್ಲೇಯ ಭಾಷೆಯಲ್ಲಿ ಇದನ್ನು "ಆಪ್ಟಿಮಮ್ ಕ್ಯಾಪಿಟಲ್" ಎಂದು ಕರೆಯುವರು. ಈ ಮಿತಿಯನ್ನು ಮೀರಿ ಇನ್ನೂ ಹೆಚ್ಚಿನ ಬಂಡವಾಳವನ್ನು ಹಾಕಿದ್ದಲ್ಲಿ ಆಧಿಕ್ಯ ಬಂಡವಾಳದಿಂದ ದೊರಕುವ ಪ್ರಯೋಜನವು ಕುಂದುತ್ತಾ ಬರುವದು. ತಮ್ಮ ಸಾಮರ್ಥ್ಯಕ್ಕೂ, ವ್ಯಾಪಾರಕ್ಕೂ ಸರಿಯಾದ "ಆಪ್ಟಿಮಮ್ ಕ್ಯಾಪಿಟಲ್" ಯಾವದೆಂದು ನಿರ್ಣಯಿಸುವದೆ ವ್ಯಾಪಾರಸ್ಥರ ಪ್ರಥಮ ಕರ್ತವ್ಯ. ತಪ್ಪದೆ ಈ ನಿರ್ಣಯವನ್ನು ಮಾಡುವ ವ್ಯಾಪಾರಿಯೆ ಯೋಗ್ಯ ವ್ಯಾಪಾರಿಯು.

"ನಾನು ವ್ಯಾಪಾರದಲ್ಲಿ ಹಾಕಿದ ಬಂಡವಾಳವು ಕಡಿಮೆಯಾಗಿರುವದರಿಂದಲೆ ನನಗೆ ಶೇಕಡಾ ೧೦ರಷ್ಟು ಪ್ರತಿಫಲವು ದೊರಕಲು ಅಸಾಧ್ಯ. ಹೀಗಿರಲು ನಾನು ಸಾಲವನ್ನು ಪಡಕೊಳ್ಳಬಹುದೊ—ಬಲ್ಲದೊ?" ಎಂದು ಯಾರೊಬ್ಬ ವ್ಯಾಪಾರಸ್ಥನು ಅನ್ನುವದಾದರೆ ಆ ಪ್ರಶ್ನೆಗೆ ಪಡಕೊಳ್ಳಬಹುದೆಂಬದೆ ಉತ್ತರ. ಸಾಲವನ್ನು ಪಡಕೊಂಡು ಜಾಗರೂಕನಾಗಿ ತನ್ನ ವ್ಯಾಪಾರವನ್ನು ನಡೆಯಿಸಿ ತನ್ನ ಬಂಡವಾಳದ ಮೇಲೆ ಸಿಕ್ಕುವ ಲಾಭವನ್ನು ಹೆಚ್ಚಿಸದೆ ಹೋದನೆಂದರೆ ಆತನು ತುಸು ಸಮಯದಲ್ಲೆ ತನ್ನ ವ್ಯಾಪಾರವನ್ನು ಕಳಕೊಳ್ಳಬಹುದು. ಆದರೆ ಈತನು ಸಾಲದ ಪರವಾಗಿ ಬ್ಯಾಂಕುಗಳನ್ನಾಶ್ರಯಿಸಿ ಫಲವಿಲ್ಲ. ಬ್ಯಾಂಕುಗಳು ಈತನಿಗೆ ಬೇಕಾದ ದೀರ್ಘ ಕಾಲ ಎರವುಗಳನ್ನು ಕೊಡಲು ಒಪ್ಪುವಂತಿಲ್ಲ.

"ಸಾಲವನ್ನು ಪಡಕೊಳ್ಳಬಹುದಾದರೆ ಎಷ್ಟರ ತನಕ ಪಡಕೊಳ್ಳಬಹುದು?" ಎಂಬದಿನ್ನೊಂದು ಪ್ರಶ್ನೆ. ಪ್ರತ್ಯೊಂದು ವ್ಯಾಪಾರಕ್ಕೂ ಅದಕ್ಕೆ ಸಂಬಂಧವಾದ ಅನೇಕ ಸಮಸ್ಯೆಗಳಿರುವುವು. ಚಿಕ್ಕದೊಂದು ವ್ಯಾಪಾರದಲ್ಲಿ ವ್ಯಾಪಾರಸರಕಿನ ಮಹಾ ಪರಿಮಾಣಕ್ಕೂ (Maximum), ಕನಿಷ್ಟ ಪರಿಮಾಣಕ್ಕೂ (Minimum) ಇರುವ ವ್ಯತ್ಯಾಸವನ್ನು ಬ್ಯಾಂಕಿನಿಂದ ಪಡಕೊಳ್ಳಬಹುದಾದ ಸಾಲದ ಮೊಬಲಗು ಎಂದು ನಿರ್ಣಯಿಸಬಹುದು. ಇದರಿಂದ ಒಂದೆರಡು ತಿಂಗಳೊಳಗಾಗಿ ಮಾರಾಟ ಮಾಡಬಹುದಾದ ಸರಕಿನ ಮೊಬಲಗು ಮಹಾ ಸಂಖ್ಯೆಯೆಂದೂ, ವ್ಯಾಪಾರಕ್ಕೆ ಯಾವ ತರದ ಹಾನಿಯೂ ಎನಿಸದೆ ಯಾವಾಗಲೂ ಇಟ್ಟುಕೊಳ್ಳಬಹುದಾದ ಸರಕಿನ ಮೊಬಲಗು ಕನಿಷ್ಠ ಸಂಖ್ಯೆಯೆಂದೂ ಸಾಧಾರಣವಾಗಿ ಹೇಳಬಹುದು.

ಸಂಕ್ಷಿಪ್ತವಾಗಿ ಹೇಳುವದಾದರೆ ಬ್ಯಾಂಕಿನಿಂದ ದ್ರವ್ಯ ಸಹಾಯವು ಪ್ರತಿಯೊಬ್ಬನಿಗೂ ಸಿಗಲಾರದು. ವ್ಯಾಪಾರದಲ್ಲಿ ಹಾಕಿದ ಸ್ವಕೀಯ ಬಂಡವಾಳವು ಅಲ್ಪವೆಂಬ ಕಾರಣದಿಂದ ದಿನಂಪ್ರತಿ ಹಲವರು ಬ್ಯಾಂಕುಗಳಿಂದ ಸಹಾಯ ಪಡೆಯಲಾಗದೆ ಖಿನ್ನಮನಸ್ಕರಾಗಿ ಹಿಂತಿರುಗುವದನ್ನು ನೀವು ಸ್ವತಃ ಕಂಡಿರಬಹುದು. ತಕ್ಕಷ್ಟು ಸ್ವಕೀಯ ಬಂಡವಾಳವನ್ನು ವ್ಯಾಪಾರದಲ್ಲಿರಿಸಿ ಬ್ಯಾಂಕಿನಿಂದ ಪಡೆದ ರೊಕ್ಕವನ್ನು ಸುಳಿಸೊತ್ತನ್ನಾಗಿ ಉಪಯೋಗಿಸುವವರಿಗಲ್ಲದೆ—ಆ ರೊಕ್ಕವನ್ನು ಸ್ಥಿರ ಬಂಡವಾಳವನ್ನಾಗಿ ಪರಿವರ್ತನಗೊಳಿಸುವವರಿಗೆ ಬ್ಯಾಂಕುಗಳು ಎಂದೆಂದಿಗೂ ಸಾಲವನ್ನು ಕೊಡಲಾರವು.

ನೋಟ್ ಪುಸ್ತಕ ಮತ್ತು ಬೇಂಕ್ ಪುಸ್ತಕ

By Sri. M. Babaraya Bhandary.

ಒಬ್ಬ ಪ್ರೊಫೆಸರರು ತನ್ನ ವಿದ್ಯಾರ್ಥಿಗಳಿಗೆ ಹೀಗನ್ನುತಿದ್ದರು. "ಪ್ರತಿಭಾವಂತ ಪುರುಷನಿಗೂ ಸಾಮಾನ್ಯ ಮನುಷ್ಯನಿಗೂ ಇರುವ ಅಂತರವೆಂದರೆ ಒಂದು ನೋಟ್ ಪುಸ್ತಕ."

ಪ್ರತಿಭಾವಂತ ಪುರುಷನು ತನಗೆ ಆಗಾಗ್ಗೆ ಹೊಳೆದ ವಿಚಾರಗಳನ್ನು ತನ್ನೊಡನೆ ಇರುವ ನೋಟ್ ಪುಸ್ತಕದಲ್ಲಿ ಕೂಡಲೇ ಬರೆದಿಡುವನು; ಅವನಿಗೆ ಅವು ಮುಂದೆ ಅವಶ್ಯಬೀಳುವವು.

ಸಾಮಾನ್ಯ ಮನುಷ್ಯನಿಗೂ ಆಗಾಗ್ಗೆ ಒಳ್ಳೇ ಭಾವನೆಗಳು ಬರುವುದುಂಟು. ಆದರೆ ಅವನು ಅವುಗಳನ್ನು ಯಾವುದರಲ್ಲಿಯೂ ಬರೆದಿಡುವುದಿಲ್ಲ. ಹೀಗಾಗಿ ಅವನಿಗೆ ಅವು ಬೇಕಾದಾಗ ಸಿಕ್ಕುವುದಿಲ್ಲ.

ಇದೇ ಮಾತನ್ನು ಯಶಸ್ವಿ ಮನುಷ್ಯನಿಗೂ ಅಯಶಸ್ವಿಗೂ ಅನ್ವಯಿಸಬಹುದು.

ಒಬ್ಬ ಹಣವಂತನು ತನ್ನ ಹಣವನ್ನು ಬ್ಯಾಂಕಿನಲ್ಲಿರಿಸುತ್ತಾನೆ. ಅದರಿಂದ ಲಾಭ ಹೊಂದಿ ಅಭಿವೃದ್ಧಿ ಹೊಂದುತ್ತಾನೆ.

ಮತ್ತೊಬ್ಬನು ಮೊದಲನೆಯವನಷ್ಟೆ ಹಣ ಸಂಪಾದಿಸುತ್ತಿರುವನು. ಆದರೆ ತನ್ನ ಹಣದ ವ್ಯವಸ್ಥೆಯು ಆತನಿಗೆ ತಿಳಿಯುವುದಿಲ್ಲ. ಅವನಿಗೆ ಬ್ಯಾಂಕ್ ವಿಚಾರಗಳು ಗೊತ್ತಿಲ್ಲ. ಇದರಿಂದ, ನಾಳೆ ತನ್ನ ಹಣವೆಷ್ಟು ಎಂದು ತಿಳಕೊಳ್ಳಲು ಅವನಿಗೆ ಗೊತ್ತಿಲ್ಲ.

ಯಶಸ್ವಿ ಮನುಷ್ಯನಾದರೋ, ಬ್ಯಾಂಕಿನಲ್ಲಿ ಹಣ ಠೇವಣಾತಿಯಿರಿಸಿ, ಪಾಸ್ ಪುಸ್ತಕ ಪಡೆಯುವನು. ತನ್ನ ನಿಧಿ ಹೇಗೆ ಬೆಳೆಯುತ್ತಿದೆಯೆಂದು ಆಗಿಂದಾಗ್ಗೆ ಆ ಪಾಸ್ ಪುಸ್ತಕ ನೋಡಿ ತಿಳಿಯುವನು.

ದುರದೃಷ್ಟದ ಕತೆಯನ್ನು ಹೇಳಿಕೊಳ್ಳುತ್ತ ಒಳ್ಳೇ ಕೆಲಸದಲ್ಲಿ ಸೇರುವ ಯತ್ನವು ಯೋಗ್ಯದಾರಿಯಲ್ಲ.

* * * *

ಮೇಲ್ಕಂಡ ಈ ಪುಟ್ಟ ವಿಷಯಗಳನ್ನು ಬುದ್ಧಿಗೆ ಹಚ್ಚಿಸಿ–ತದ್ರೀತಿಯಲ್ಲಿ ನಡೆಯುವವರಿಗೆ ಬ್ಯಾಂಕಿನಿಂದ ಹಣ ಪಡಕೊಂಡಲ್ಲಿ ಯಾವ ತರದ ತೊಂದರೆಯೂ ಸಂಭವಿಸಲಾರದು; ಅದಲ್ಲದೆ ವರ್ತಕಮಂಡಲಕ್ಕೆ ಬ್ಯಾಂಕುಗಳು ಕಟ್ಟಿಲ್ಲದೆ ಮಾಡುವ ಸೇವೆಯನ್ನು ಅವರು ಸ್ವೀಕರಿಸಿದಂತಾಗುವದು. ಬ್ಯಾಂಕಿನಿಂದ ತಿರಸ್ಕಾರಹೊಂದಿದವರು ಅದರಯತಾರ್ಥತೆಯನ್ನು ತಿಳಿಯಲು ಶಕ್ತರಾಗುವರು.

ಕೆನರಾ ಬ್ಯಾಂಕಿನ ಸ್ಥಾಪಕರಾದ

ದಿವಂಗತ ಶ್ರೀ. ಅಮ್ಮೆಂಬಳ ಸುಬ್ರಾವ್ ಪೈ

ಅವರ ಜೀವನ ಚರಿತ್ರೆ

ನಮ್ಮ ಕೆನರಾ ಬ್ಯಾಂಕಿನ ಸ್ಥಾಪಕರು ಸಂದು ಹೋಗಿ ಇಂದಿಗೆ ಸುಮಾರು ೩೫ ವರುಷಗಳು ಕಳೆದು ಹೋದುವು. ಈ ದೊಡ್ಡ ಸಮಯಾಂತರದಲ್ಲಿ ನಮ್ಮ ಈ ತಾಯಿನಾಡಿನ ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಯಲ್ಲಿ ಮಹತ್ತ್ವದ ಮಾರುಪಾಟಗಳು ಆಗಿ ಹೋಗಿವೆಯೆಂಬುದು ಎಲ್ಲರಿಗೂ ತಿಳಿದ ಅಂಶ. ನಮ್ಮ ವಾಚಕವರ್ಗದಲ್ಲಿ ಬಹು ಮಂದಿಗೆ ಮಾನ್ಯ ಸ್ಥಾಪಕರ ಕಾಲೀನ ಜೀವಿತ ಕ್ರಮವೂ, ಪರಿಭಾವನೆಯ ಅಭ್ಯಾಸವೂ ಯಾವ ರೀತಿಯಲ್ಲಿತ್ತೆಂಬುದರ ಕುರಿತು ಸ್ವಂತ ಅರಿವು ಇಲ್ಲವೆಂದನ್ನಬಹುದು. ಆದುದರಿಂದ ಶ್ರೀ। ಸುಬ್ಬರಾಯರ ಜೀವಿತ ವೃತ್ತಾಂತವನ್ನೂ ಅವರು ನಿರ್ವರ್ತಿಸಿದ ಕಾರ್ಯಗಳನ್ನೂ ಗ್ರಹಣ ಮಾಡುವುದೆಂದರೆ ನಮ್ಮ ದೇಶದ ಆ ಕಾಲದ ಪರಿಸ್ಥಿತಿಯನ್ನು ನಮ್ಮ ಮಾನಸಿಕ ರಾಜ್ಯದಲ್ಲಿ ಕಲ್ಪಿಸಬೇಕಾಗುವುದು.

ನಮ್ಮ ಚರಿತ್ರಾನಾಯಕರು ಶಾಲಾ ಮತ್ತು ಕೊಲೇಜ್ ವಿದ್ಯಾವ್ಯಾಸಂಗದಲ್ಲಿ ಅತ್ಯಂತ ನಿಪುಣರೆಂಬದಾಗಿ ಖ್ಯಾತಿ ಹೊಂದಿದ್ದರು. ಆದರೆ ಚಿಕ್ಕ ವಯಸ್ಸಿನಲ್ಲಿ ಮಾತ್ರ ಇತರ ದೊಡ್ಡ ಮನುಷ್ಯರಂತೆ ಶಾಲಾಪಾಠಗಳಿಗಿಂತ ಕೀಟಲೆಗಳ ಕಡೆಗೇನೇ ಮಾನ್ಯರ ಮನಸ್ಸು ಹೆಚ್ಚಿಗೆ. ೧೮೭೦ನೇ ಇಸವಿಯಲ್ಲಿ ಫ್ರೌಢ ವಿದ್ಯಾಭ್ಯಾಸಕ್ಕಾಗಿ ಮದ್ರಾಸಿನ ಪ್ರೆಸಿಡೆನ್ಸಿ ಕೊಲೇಜಿನ ಪ್ರವೇಶವಾಗಿ ಬಿ. ಎ. ಪರೀಕ್ಷೆಯಲ್ಲಿ ಸಂಸ್ಥಾನದ ದ್ವಿತೀಯ ಸ್ಥಾನವನ್ನು ಪಡೆದದ್ದೂ ಆಯಿತು. ಆ ಪರೀಕ್ಷೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದವರೆಂದರೆ ದಕ್ಷಿಣ ಹಿಂದೂಸ್ಥಾನದ ಪ್ರಥಮ ಐ. ಸಿ. ಯಸ್. ಪದವೀಧರರಾದ ಸ್ವರ್ಗವಾಸಿ ರತ್ನವೇಲು ಚೆಟ್ಟಿಯಾರರು. ಕೆಲವು ಕಾಲ ಮೈಸೂರು ಹೈಕೋರ್ಟು ನ್ಯಾಯಾಧೀಶರಾದ ಶ್ರೀ। ರಾಮಚಂದ್ರ ಐಯರರೂ ನಮ್ಮ ಚರಿತ್ರಾನಾಯಕರೂ ಮದ್ರಾಸಿನಲ್ಲಿ ಸಹಪಾಠಿಗಳೂ ಅಚ್ಚುಮಿತ್ರರೂ ಆಗಿದ್ದರೆಂಬುದು ನಮ್ಮ ಮೈಸೂರು ನಾಡಿನ ವಾಚಕರಿಗೆ ಅನುರಂಜಿಸಲಿಕ್ಕೆ ಸಾಕು. ಬಿ. ಎ. ಪರೀಕ್ಷೆಯಲ್ಲಿ ತಪ್ಪಿಹೋದ ಪದವಿಯು ಮಾನ್ಯರಿಗೆ ಬಿ. ಯಲ್. ಪರೀಕ್ಷೆಯಲ್ಲಾದರೂ ಲಭಿಸಿತು. ಆ ಪರೀಕ್ಷೆಯಲ್ಲಿ ಅವರ ಹೆಸರು ಇಡೀ ಸಂಸ್ಥಾನದ ತೇರ್ಗಡೆ ಪಟ್ಟಿಯಲ್ಲಿ ಪ್ರಥಮ ಸ್ಥಾನವನ್ನು ಅಲಂಕರಿಸಿತು. ಬಿ. ಎಲ್. ಕ್ಲಾಸಿನಲ್ಲಿ ಕಲಿಯುವಾಗ ಮಾನ್ಯರ ವಿಚಕ್ಷಣತೆಯೂ ಬುದ್ಧಿಪ್ರಭೆಯೂ ಆಗಿನ ಮದ್ರಾಸ್ ಹೈಕೋರ್ಟಿನ ನ್ಯಾಯಾಧೀಶರಾಗಿದ್ದ ಹೊಲ್ಲೊವೇ ಧೊರೆಗಳ ದೃಷ್ಟಿಪಥದಲ್ಲಿ ಬಿದ್ದು, ಧೊರೆಗಳ ಅಮೂಲ್ಯ ಕಾನೂನು ಪುಸ್ತಕ ಭಂಡಾರದ ಉಪಯೋಗವೂ ಪ್ರತಿ ಶನಿವಾರ ನ್ಯಾಯವ್ಯೂರ್ತಿಗಳು ವಿದ್ಯಾರ್ಥಿಗಳೊ

ಸ್ಥಾಪಕರು

ಡನೆ ನಡಿಸುತ್ತಿದ್ದ ಬೋಧಪರ ಮತ್ತು ಸೊಗಸಾದ ಸಂಭಾಷಣೆಗಳ ಅಮೂಲ್ಯ ಲಾಭವೂ ಮಾನ್ಯರಿಗೆ ದೊರಕಿತು. ಕಡೆಗೆ ಧೊರೆಗಳಿಗೆ ನಮ್ಮ ಸುಬ್ಬರಾಯರ ಮೇಲೆ ಎಷ್ಟೊಂದು ಪ್ರೀತಿ ಬಿತ್ತೆಂದರೆ ಅವರನ್ನು ಉಚ್ಚ ಶಿಕ್ಷಣಕ್ಕೋಸ್ಕರ ವಿಲಾಯಿತಿಗೆ ತನ್ನೊಡನೆ ಕರಕೊಂಡು ಹೋಗುವ ಇಚ್ಛೆಯನ್ನೂ ವ್ಯಕ್ತಪಡಿಸಿದರಂತೆ. ಆದರೆ ಅಂದಿನ ಗಡುಸು ಸಾಮಾಜಿಕ ಕಟ್ಟಳೆಗಳಿಂದ ಅದು ಸಾಧ್ಯವಾಗಲಿಲ್ಲ.

ವಿದ್ಯಾವ್ಯಾಸಂಗವು ಮುಗಿದ ತರುವಾಯ ಮಾನ್ಯರು ಮಂಗಳೂರಿನಲ್ಲಿ ಹೈಕೋರ್ಟು ವಕೀಲ ವೃತ್ತಿಯನ್ನು ಪ್ರಾರಂಭಿಸಿದರು. ಆದರೆ ಸಿವಿಲ್ ವ್ಯವಹರಣೆಗಳನ್ನಲ್ಲದೆ ಕ್ರಿಮಿನಲ್ ಖಟ್ಲೆಗಳಲ್ಲಿ ಪ್ರಾರಂಭದಿಂದ ಅಂತ್ಯದ ವರೆಗೆ ವಕಾಲತು ಸ್ವೀಕರಿಸಲಿಲ್ಲ. ವಕೀಲ ವೃತ್ತಿಯಲ್ಲಿ ಸುಬ್ಬರಾಯರು ತುಂಬಾ ಶ್ರೇಯಸ್ಸನ್ನೂ ದ್ರವ್ಯ ಸಂಗ್ರಹವನ್ನೂ ಮಾಡಿ ಆಗಿನ ಸ್ವಾಮುಖ್ಯ ವಕೀಲರಲ್ಲಿ ಶ್ರೇಷ್ಠ ಪದವಿಯನ್ನು ಸಂಪಾದಿಸಿದರು. ಆದರೆ ಮಾನ್ಯರ ಒಂದು ವಿಚಿತ್ರ ನಡವಳಿ ಎಂದರೆ ಇತ್ತಂಡದ ಕಕ್ಷಿಗಾರರನ್ನು ಸಮಜಾಯಿಸಿ ರಾಜಿಯಿಂದಲೇ ಖಟ್ಲೆಗಳನ್ನು ಇತ್ಯರ್ಥಮಾಡುವುದೇ—. ಇದರಿಂದಾಗಿ ನಾಡಿನ ಹಲವಾರು ಸಂಭಾವಿತ ಕುಟುಂಬಗಳು ಕೋರ್ಟು ಖರ್ಚೇರಿಗಳ ನಷ್ಟ ಕಷ್ಟಗಳಿಂದ ರಕ್ಷಿಸಲ್ಪಟ್ಟುವು.

೧೮೮೧ರಲ್ಲಿ ಮಾನ್ಯರು ಕೆಲವು ಉತ್ಸಾಹೀ ತರುಣರ ಒಂದು ಪಂಗಡವನ್ನು ಪ್ರೇರಿಸಿ ತನ್ನ ಮುಖಂಡತನದಿಂದ ಮಂಗಳೂರಿನಲ್ಲಿ ಕೆನರಾ ಹೈಸ್ಕೂಲ್ ಎಂಬ ಹೆಸರಿನಿಂದ ಒಂದು ವಿದ್ಯಾಪೀಠವನ್ನು ನಿರ್ಮಾಣಮಾಡಿದರು. ಇಂದು ಈ ಶಾಲೆಯು ಸಂಸ್ಥಾನದಲ್ಲಿ ಹೆಸರುವಾಸಿಯಾಗಿ ತನ್ನ ಜೀವಿತದ ೫೦ ವರ್ಷದ ಸುವರ್ಣ ಮಹೋತ್ಸವವನ್ನು ಆಚರಿಸಿದೆ. ಇದಾದ ಕೆಲವು ವರ್ಷಗಳಲ್ಲಿಯೇ ಕೆನರಾ ಗರ್ಲ್ಸ್ ಸ್ಕೂಲ್ ಎಂಬ ಹೆಸರಿನಿಂದ ಹುಡುಗಿಯರ ಶಾಲೆಯೊಂದನ್ನು ಸ್ಥಾಪಿಸಿದರು. ಸ್ತ್ರೀ ವಿದ್ಯಾಭ್ಯಾಸವೇ ದೇಶದ ಉನ್ನತಿ ಮಾರ್ಗವೆಂಬುದನ್ನು ಮಾನ್ಯರು ಸುಮಾರು ಅರ್ಧ ಶತಮಾನದ ಹಿಂದೆಯೇ ಲೆಕ್ಕಿಸಿ, ಆಗಿನ ಕೆಲವು ಹಿಂದು ವಿತಂತುಗಳನ್ನು ಪೂರ್ಣಯ ವಿಧವಾಶ್ರಮಕ್ಕೆ ಕಳುಹಿಸಿದರು.

ಆಗ್ಗೆ ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿ ವ್ಯಾಪಾರಸ್ಥರಿಗೆ ಅನುಕೂಲತೆಗಳನ್ನು ಒದಗಿಸಿಕೊಡುವ ಬರೇ ಒಂದೇ ಒಂದು ಬ್ಯಾಂಕು ಇತ್ತು. ಅದೆಂದರೆ ಇಂದಿನ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯದ ಪುರೋಗಾಮಿಯಾದ ಬೇಂಕ್ ಆಫ್ ಮದ್ರಾಸ್ ಎಂಬ ಸಂಸ್ಥೆಯಾಗಿತ್ತು. ಸಂಸ್ಥೆಯ ಪರಿಮಾಣಕ್ಕೆ ಅನುಗುಣವಾಗಿ ಆ ಬ್ಯಾಂಕು ದೊಡ್ಡ ವರ್ತಕರಿಗೂ ಶ್ರೇಷ್ಠ ತರಗತಿಯ ಗೃಹಸ್ಥರಿಗೂ ಮಾತ್ರ ಸಾಲಗಳನ್ನು ಕಲಪೆಡೆ ೧೫ರಿಂದ ೧೮ರ ಸಲೆಯ ಬಡ್ಡಿಯಿಂದ ಕೊಡುವ ವಾಡಿಕೆ ಇತ್ತು. ಹೀಗಾಗಿ ಚಿಕ್ಕ ವ್ಯಾಪಾರಿಗಳ ಪಾಡು ತುಂಬಾ ಶೋಕಜನಕವಾಗಿತ್ತು. ಈ ಪರಿಸ್ಥಿತಿಯ ಸುಧಾರಣೆಗೋಸ್ಕರ ಮಾನ್ಯರು ೧೯೦೬ನೇ ಜುಲೈ ೧೯ನೇ ದಿನ ದಿ ಕೆನರಾ ಬ್ಯಾಂಕ್ ಎಂಬ ದೇಶೀ ಬ್ಯಾಂಕಿಂಗ್ ವ್ಯವಹಾರದ ಸಂಸ್ಥೆಯನ್ನು ಪ್ರಾರಂಭಿಸಿದರು. ಈ ಬ್ಯಾಂಕಿನ ಪ್ರಾರಂಭದ ನಿಬಂಧನೆಯೆಂದರೆ ಯಾವ ಸಂದರ್ಭದಲ್ಲೂ ಯಾವ ಸಾಲಕ್ಕೂ ೧೫ರ ಸಲೆಗೆ ಎಕ್ಕಿದ ಬಡ್ಡಿಯನ್ನು ವಿಧಿಸಬಾರದೆಂಬುದೇ.

ಮಾನ್ಯರು ಆ ಕಾಲದಲ್ಲಿ ವಾಕ್ಚಾತುರ್ಯದಲ್ಲಿ ಪ್ರಸಿದ್ಧ ಪುರುಷರೆಂದೆನಿಸಿದ್ದರು. ಆಂಗ್ಲ ಭಾಷೆಯಲ್ಲಾಗಲೀ ದೇಶ ಭಾಷೆಗಳಲ್ಲಾಗಲೀ ಎಡೆತಡೆ ಇಲ್ಲದ ವಾಕ್ಪಟುಗಳಾಗಿದ್ದರು. ಅಂದು ಕನ್ನಡದ ಕಡೆಗೆ ತುಂಬಾ ಉದಾಸೀನತೆ ಇದ್ದ ಸಮಯದಲ್ಲಿ ಮಾನ್ಯರಿ ಕನ್ನಡ ವ್ಯಾಸಂಗವೂ, ಕನ್ನಡ ವಾಂಙ್ಮಯ ಜ್ಞಾನವೂ ಅವರನ್ನು ವಿಶ್ವವಿದ್ಯಾಲಯದ ಕನ್ನಡ ಪರೀಕ್ಷಕರನ್ನಾಗಿ ನೇಮಿಸುವಂತೆ ಸಾಧಿಸಿತು. ಬಿ. ಎಲ್. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಕೆಲವು ವರ್ಷಗಳ ವರೆಗೆ ಈ ರೀತಿ ಅವರು ಕನ್ನಡದಲ್ಲಿ ಪರೀಕ್ಷಕರಾಗಿದ್ದರು. ಆದರೆ ಪ್ರತಿಯೋರ್ವ ಕನ್ನಡಿಗನಿಗೆ ಸಂಸ್ಕೃತದ ಸ್ವಲ್ಪವಾದರೂ ಜ್ಞಾನವಿರಬೇಕೆಂಬುದೇ ಅವರ ಹೇಳಿಕೆಯಾಗಿತ್ತು. ಹೀಗಾಗಿ ಕೆನರಾ ಹೈಸ್ಕೂಲಿನಲ್ಲಿ ವಿದ್ಯಾರ್ಥಿವೇತನ (Scholarship) ವನ್ನು ಅಪೇಕ್ಷಿಸುವ ಪ್ರತಿಯೋರ್ವ ಬಡ ವಿದ್ಯಾರ್ಥಿಯು ಸಂಸ್ಕೃತವನ್ನು ಎರಡನೇ ಭಾಷೆಯಾಗಿ ಕಲಿಯಬೇಕೆಂಬ ನಿಕಟ ನಿಬಂಧನೆಯನ್ನು ಅವರು ಶಾಲೆಯಲ್ಲಿ ಏರ್ಪಡಿಸಿದ್ದರು. ಆದರೆ ದುರ್ಭಾಗ್ಯದಿಂದ ಅವರ ನಿಧನದ ತರುವಾಯ ಈ ನಿಬಂಧನೆಯೂ ರದ್ದಾಯಿತು.

ಮಂಗಳೂರಿನಂತಹ ಒಂದು ಪ್ರಾಂತಿಕ ಪಟ್ಟಣದ ಪರಿಮಾಣದಲ್ಲಿ ಮಾನ್ಯರ ವಕೀಲ ವೃತ್ತಿಯವರ ಮಾನವು ದೊಡ್ಡದಿದ್ದರೂ, ಆ ಹುಟ್ಟಿನ ಹೆಚ್ಚಿನಾಂಶವು ಬಡಪಾಯಿಗಳ ಸುಖಜೀವನಕ್ಕೂ, ಬಡ ವಿದ್ಯಾರ್ಥಿಗಳ ವಿದ್ಯಾರ್ಜನೆಗೂ ವಿನಿಯೋಗಿಸಲ್ಪಡುತಿತ್ತು. ಕ್ರಿಸ್ತಿಯರ ವೇದ ಪುಸ್ತಕವಾದ ಬ್ಯಾಬಲ್ ಗ್ರಂಥದ ಹೇಳಿಕೆಯಂತೆ ತನ್ನ ಬಲಗೈ ಮಾಡಿದ ದಾನವು ಎಡಕೈಗೆ ತಿಳಿಯದಂತೆ ವರ್ತಿಸಿದವರೆಂದರೆ ಅವರು ಮಾನ್ಯರೇ ಸರಿ. ಅವರ ದಾನಧರ್ಮಗಳಿಗೂ ಪರೋಪಕಾರಕ್ಕೂ ಜಾತಿಮತಗಳೆಂಬ ಮೇರೆಗಟ್ಟುಗಳಿದ್ದಿಲ್ಲ. ನಮ್ಮ ಮಕ್ಕಳಿಗೆ ಅವರ ಯೋಗ್ಯತಾನುಸಾರ ಉತ್ತಮ ತರದ ವಿದ್ಯಾಭ್ಯಾಸವನ್ನು ಕೊಟ್ಟು, ನಮ್ಮ ನಿಧನದ ತರುವಾಯದ ಆರು ತಿಂಗಳ ಅಶನವಸನಕ್ಕೆ ಸಾಕಷ್ಟಲ್ಲದೆ ಹೆಚ್ಚಿನ ಹಣ ಒದಗಿಸಿಕೊಡುವುದು ಉಚಿತವಲ್ಲವೆಂದು ಅವರು ಆಗಿಂದಾಗ್ಗೆ ಅನ್ನುವ ವಾಡಿಕೆ ಇತ್ತು. ಮತ್ತು ಅನೇಕ ಧನಿಕರ ಮಕ್ಕಳು ಯಾವ ರೀತಿಯಲ್ಲಿ ಹಿರಿಯರ ಧನಸಂಗ್ರಹದ ದೆಸೆಯಿಂದ ನಡತೆಯನ್ನೂ ಜೀವ ಮಾನವನ್ನೂ ಕಳಕೊಂಡ ಉದಾಹರಣೆಗಳನ್ನು ಪದೇ ಪದೇ ಎತ್ತಿ ಹೇಳುತಿದ್ದರು.

ಮಾನ್ಯರಿಗೆ ಚಿರಾಕರ್ಷಕವಾದ ರಾಜ ಯೋಗ್ಯ ಮುಖಚರ್ಯೆಯೂ ಇತ್ತು. ಇದರಿಂದಾಗಿ ೧೯೦೫ರಲ್ಲಿ ಜರಗಿದ ಸ್ವಜಾತಿ ಸಮಾಜದ ಪರಿಷತ್ತಿಗೆ ಉತ್ತರದಲ್ಲಿ ಸತಾರದಿಂದ ತೊಡಗಿ ದಕ್ಷಿಣದಲ್ಲಿ ಕೊಲ್ಲಾಂ ತನಕ ಊರುಗಳಿಂದ ಬಂದಿದ್ದ ಸಭಾಸದರು ಮಾನ್ಯರ ಪ್ರಥಗಾತ್ಮತೆಗೆ ಮನಸೋತು ಹೋದರು. ಅನ್ಯ ಜನಾಂಗದ ಕೈಯಾಳುಗಳಾಗಿರುವ ನಮ್ಮ ಪಾಡು ಅವರ ಮನಸ್ಸಿಗೆ ತುಂಬಾ ನಾಟಿತ್ತು. ಅದರಿಂದಾಗಿ ರಾಜ್ಯ ಭಾರಕ್ಕೆ ಸಂಬಂಧಪಟ್ಟ ಯಾವ ಕಾರ್ಯದಲ್ಲೂ ಗವರ್ನರುಗಳ ಆಗಮನ ಮುಂತಾದ ಯಾವ ಸಂದರ್ಭದಲ್ಲಿಯೂ ಎಷ್ಟಾದರೂ ಭಾಗವಹಿಸುತಿದ್ದಿಲ್ಲ.

(೧೬ನೇ ಪುಟಕ್ಕೆ ಮುಂದುವರಿಸಿಯದೆ)

1941ನೇ ವರುಷವು ಉರುಳಿತು!

1941ನೇ ವರುಷವುರುಳಿತು!

ಪ್ರತಿಯೊಬ್ಬನೂ ಒಂದೊಂದು ವರ್ಷಕ್ಕೆ ಹಿರಿಯನಾದನು.

ಉರುಳಿಹೋದ ವರುಷದಲ್ಲಿ ನೀವು ಮಾಡಿದುದೇನು?
ಹಣವುಳಿಸಿದಿರಾ? ಅಥವಾ ದುಂದುವ್ಯಯ ಮಾಡಿದಿರಾ?
ಅಪದ್ಧನದ ಆಲೋಚನೆಯಾಯಿತೇ? ಸಾಧಿಸಿದಿರಾ?

ವರುಷಗಳು ಉರುಳುವವು, ಮನುಷ್ಯನು ಮುದಿಯನಾಗುವನು.

ಆಪದ್ಧನವಿರಬೇಕಿತ್ತೆಂದು

ಸಮಯ ಮಿಂಚಿಹೋದಾಗ ಚಿಂತಿಸದಂತೆ ಸದಾ ಎಚ್ಚರವಿರಲಿ!

ಕೆನರಾ ಬ್ಯಾಂಕ್, ಲಿಮಿಟೆಡ್.
ಸ್ಥಾಪನೆ: 1906.

This Prospectus has been filed with the Assistant Registrar of Joint Stock Companies, Mangalore and copies have been delivered to the Registrars of Joint Stock Companies, Mysore. Cochin and Travancore.

The Subscription List will open on Monday the 19th January 1942 and close on Saturday the 24th January 1942 or earlier as may be decided by the Directors of the Company.

ESTABLISHED: 1906

CANARA BANK, LIMITED.

(Incorporated in British India under the Indian Companies Act 1882)

Liability of Members Limited.

Registered Office: LIGHT HOUSE HILL, MANGALORE.

Branches: Alleppey, Arsikere, Bangalore-City, Belgaum, Bombay-Fort, Bombay-Mandvi, Bombay-Girgaum, Bombay-Parel, Bombay-Kalbadevi, Badagara, Bantwal, Belthangady, Calicut, Cannanore, Chickmagalur, Cochin, Coondapoor, Cherai, Davangere, Dharwar, Dodballapur, Ernakulam, Ganguli, Hubli, Karkala, Kasaragode, Kumbla, Kayamkulam, Mangalore-Bunder, Mangalore-City, Manjeshwar, Moolky, Payyanur, Puttur, Quilon, Udipi and Uppinangady.

Authorised Capital Rs. 25,00,000

Divided into

20,000 Ordinary Shares of Rs. 50 each

AND

30,000 five percent Cumulative Preference Shares of Rs. 50 each

The following special rights and privileges shall attach to the Preference Shares:

1. The holders of such Preference Shares shall be entitled to receive out of the profits of the Company as a first charge a cumulative preferential dividend at the rate of 5% per annum on the capital for the time being paid up on such shares respectively.

2. In the event of the Company being wound up the surplus assets thereof shall be applied in the first place in repayment to the holders of the said Preference Shares and of any other shares entitled to rank pari passu with them the full amount paid thereon and the arrears (if any) of the preferential dividend aforesaid to the commencement of winding up and subject as aforesaid such surplus assets shall belong to and be divided among the other members of the Company.

The Company is to be at liberty from time to time to create and issue further Preference Shares ranking in all respects pari passu with the above mentioned Preference Shares.

Issued and Subscribed Capital.

12,000
Ordinary Shares of
Rs. 50 each.

Paid up Capital

6,000 Shares Rs. 50 paid up
6,000 Shares Rs. 20 paid up
Less calls in arrears Rs. 1,863—12—11

Present Issue

8,000 five per cent Cumulative Preference Shares of Rs. 50 each which number may be increased at the discretion of the Directors.

Out of the above a sufficient number of shares have been offered in the first place to the holders of existing shares in the proportion of one Preference Share for every two Ordinary Shares held by them respectively.

The amount payable in respect of the Preference Shares is as follows:—

On application Rs. 5 per share with Re. 0—4—0 entrance fee for each share.

On allotment Rs. 5 per share.

The balance of Rs. 40 per share is payable in eight quarterly instalments of Rs. 5 each. The first such instalment will fall due on 15th May 1942 and the others on the 15th of every succeeding third month thereafter.

OR

The shares may be made fully paid up at the option of the allottee either on allotment or at any time before 15th May 1942.

Board of Directors

Messrs.

1. A. Srinivasa Pai, B. A., B. L., Advocate, Kasaragod. (***Chairman***)
2. B. Venkatrao Baliga, B. A., B. L., M. L. A., Vakil, Mangalore.
3. U. Srinivasa Malliah, Merchant, Mangalore.
4. M. Padmanabha Raghunatha Pai, Merchant, Mangalore.
5. M. Venkatesh Pai, Banker, Mangalore.
6. H. Laxminarayana Kamath, Merchant, Ganguli.
7. C. Shrinivasa Rao, Savkar, Nagar.
8. M. Gopalkrishna Kamath, Merchant, Coondapur.
9. A. Damodara Pai, B. A., B. L., Vakil, Mangalore.
10. V. Venkat Rao, B. A., Retired Tahasildar, Mangalore.
11. S. Pundalika Nayak, Commission Agent, Bombay.
12. K. P. Janardhan Prabhu, B. A., Land-holder, Mangalore.

GENERAL MANAGER

Mr. P. S. Nayak, B. A., B. L.,
Fellow of the Indian Institute of Bankers.

AUDITOR

Mr. A. Umanath Rao, B. A., Dip. Econ., G. D. A., R. A.
Registered Accountant & Auditor.

PROSPECTUS

Of the history of the Canara Bank, its service its policies and the position it now occupies in banking circles, little need be said to those that will read this Prospectus.

Increase of Capital

The business of the Company has during the last few years developed to such an extent that the Directors consider the time has arrived for increasing its capital. Further the ever increasing contacts consequent on the development of business has justified the belief that there is an unsatisfied demand for shares of the Bank.

Present Issue

The present issue is limited to 8000 Preference Shares (which number may be increased at the discretion of the Directors) issued at par. Of these such number of shares as may be necessary are offered in the first instance to present Shareholders at the rate of one preference share for every two existing shares held by them respectively and the rest to our patrons and well-wishers. The terms are sufficiently attractive to justify an expectation that there will be a good demand for these shares.

The subscription lists will open on monday the 19th January 1942 and will be closed as soon as applications for the approximate number of shares which the Directors consider sufficient for the present are received but in no case will the lists be open after Saturday the 24th January 1942.

Voting

No member shall be entitled to be present or vote on any question, either personally or by proxy or as a proxy for another member, at any general meeting, or upon a poll, or be reckoned in a quorum, until he shall have paid all calls and all other monies presently payable by him in respect of shares held by him singly or jointly with others.

If two or more persons be jointly entitled to shares conferring the right to vote, any one of them may vote in respect thereof, as if he were sole owner thereof, but in case more than one of several joint holders be present personally or by proxy the member whose name stands first in the Register out of those present as one of the holders of such shares, and no other, shall be entitled to vote in respect of the same.

At each general meeting at which he is entitled to be present a member has one vote on a show of hands and on a poll one vote for every Ordinary Share and one vote for every two Preference Shares of which he is the holder.

Transfer of Shares

The following are the provisions in the articles *re:* restrictions on transfer:

"An application for the registration of transfer of shares in the Bank may be made either by the transferor or transferee, but the Directors may at any time, in their absolute and uncontrolled discretion and without assigning any reasons decline to register any transfer of hares, voluntary or otherwise (including court sales) whether fully paid up or not. If the Directors decide to recognize any instrument of transfer and such application is made by the transferor, no registration shall, in the case of partly paid up shares, be effected unless the Bank gives notice of the application to the transferee. If within two weeks of the receipt of notice no objection is made by the transferee, the Bank shall enter in its Register of Members, the name of the transferee, in the same manner, and subject to the same conditions as if the application for registration was made by the transferee. Where however the Bank refuses to register the transfer of any shares, the Bank shall, within two months of the date when the instrument of transfer was lodged with the Bank, send to the Transferee and Transferor notice of the refusal."

"For the purpose of this Article notice to the Transferee or Transferor shall be deemed to have been duly given, if despatched by prepaid post to the address given in the instrument of transfer, and shall be deemed to have been delivered in the ordinary course of post."

Report of the Auditor

Under Section 93 1A (i) of the Indian Companies Act, 1913.

I beg to report that the net profits of the Canara Bank, Ltd., in each of the following three years have been as follows:—

Year ending 31—12—1938	...	Rs. 67,443—14—1
Year ending 31—12—1939	....	Rs. 55,003— 0—6
Year ending 31—12—1940	...	Rs. 71,726— 5—0
		Rs. 1,94,173—3—7

Out of its profits the Bank has paid dividends as follows:—

For the year ending 31—12—1938

Dividend of 9% and bonus of 1% per annum on 6000 shares of Rs. 50 paid up and 6000 shares Rs. 10 paid up less calls in arrears Rs. 225. Rs. 35,322—5—6

For the year ending 31—12—1939

Dividend of 9% and bonus of 1% per annum on 6000 shares of Rs. 50 paid up and 6000 shares of Rs. 15 paid up less calls in arrears Rs. 1178. Rs. 38,131—6—4

For the year ending 31—12—1940

Dividend of 8% per annum on 6000 shares of Rs 50 paid up and 6000 shares of Rs. 15 paid up less calls in arrears Rs. 108—0—1. Rs. 31,180—0—6

The Bank has transferred the following amounts to one or other Reserves during each of the following three years.

Year ending 31—12—1938	...	Rs. 31,307— 9—0
Year ending 31—12—1939	...	Rs. 18,200— 0—0
Year ending 31—12—1940	...	Rs. 41,369— 3—7
		Rs. 90,876—12—7

The trading results and all charges and expenses incidental thereto excluding income or profits having no relation to the trading for the period covered and excluding also items of profit or income of a non-recurring nature are as follows:—

		1938	1939	1940
Income	Rs.	5,61,075-13-7	5,17,054-15- 9	4,87,685-13-11
Expenditure	,,	4,87,064-13-7	4,49,128- 9-11	4,21,362-12- 3
Trading Results:	,,	74,011- 0-0	67,926- 5-10	66,323- 1- 8

The accounts for the year beginning with 1st January 1941 remain to be made up in due course.

Place: MANGALORE.
Date 14—12—1941.

(*Sd*) *N. Umanath Rao,*
AUDITOR.

Application for Shares

Application for shares should be made upon the form accompanying the prospectus and sent to any office of the Bank together with a remittance of the amount due on application.

Where no allotment is made the deposit will be returned in full, and where the number of shares allotted is less than the number applied for, the balance of the deposit will be applied towards the remaining payments and the balance if any returned.

Failure to pay any future instalments on shares allotted when due will render previous payments liable to forfeiture.

APPLICATION FOR 10 SHARES AND APPLICATIONS BY DEPOSITORS AND CUSTOMERS OF THE BANK WILL RECEIVE PREFERENTIAL CONSIDERATION.

Brokerage

A brokerage of annas two per share will be paid to authorised brokers on all shares applied for through them and allotted.

Prospectuses and forms of application can be obtained at any office of the Bank.

Copies of the Memorandum and Articles of Association of the Bank are available for inspection during business hours at the Registered Office and at the Chickmagalur, Cochin and Alleppey Offices of the Bank. This prospectus is issued subject to the provisions contained in such Memorandum and Articles of Association.

The company has places of business in the States of Mysore, Cochin and Travancore and for the purposes of the Companies Acts in the several States the addresses of the principal offices are respectively as follows:—

1. Syed Road, Chikmagalur. 2. Mattanchery, Cochin. 3. Gowri Mahal, Alleppey.

Share Certificates

Share Certificates will be ready within two months of payment in full of the shares to which they relate.

Sd. K. P. Janardhan Prabhu. Sd. A. Damodara Pai. Sd. H. Laxminarayana Kamath. Sd. B. Venkatarao Baliga. Sd. M. Madhava Rau Under Power of Attorney from Mr. A Srinivasa Pai. Sd. Sujir Damodar Nayak Under Power of Attorney from Mr. Sujir Pandalik Nayak. Sd. U. Subraya Malliah Under Power of Attorney from Mr. Ullal Srinivas Malliah. Sd. V. Venkat Rao. Sd. M. Venkatesh Pai. Sd. M. Gopala Krishna Kamath. Sd. M. Padmanabha Raghunath Pai. Sd. M. Laxman Pai Under Power of Attorney from Mr. C. Srinivasa Rao.

Mangalore,
Dated 15th December 1941.

CANARA BANK, LIMITED.

Incorporated in British India under the Indian Companies Act 1882.
Liability of members limited.

Form of Application for 5% Cumulative Preference Shares.

To

The Directors,
Canara Bank, Limited,
MANGALORE.

Gentlemen,

I/We request you to allot me/us ..... five per cent Cumulative Preference Shares of Rs. 50/— each in the above named Bank upon the terms of the Bank's prospectus, dated the 15th day of December 1941, and I/we hereby agree to accept the same or any smaller number that may be allotted to me/us; and I/we authorise you to place my/our name(s) on the register of members in respect of the shares so allotted.

I/We send herewith the sum of Rs. ..... being deposit, on application for the above mentioned number of shares at Rs. 5/— per share and entrance fee at Re. 0—4—0 per share and agree to pay the balance of Rs. 45/— per share as per terms of the said prospectus.

Yours faithfully

Place .....

Date .....

..... *Usual Signature.*

Name in full in Capital letters. Also Mr. Mrs. or Miss. .....

If minor, date of birth & guardian's name in full. If institution, name of principal Officer. .....

Father's/Husband's name .....

Occupation .....

Full Address .....

This form when completed is to be sent to the Canara Bank, Ltd., at any of its branches with a remittance for the amouut payable on application. Cheques are to be drawn in favour of "Canara Bank, Ltd." and crossed.

ಜನತೆಗೆ ಸಲ್ಲಿಸುವ ಬ್ಯಾಂಕಿನ ಸೇವೆ

By: Sri. P. Dasa Kini & Sri. U. Surendra Shenoi.

ಸರ್ವಸಾಮಾನ್ಯವಾಗಿ ಗಿರಾಕಿಗಳಿಗೂ, ವ್ಯಾಪಾರ ಕೈಗಾರಿಕೆಗಳಿಗೂ ಬ್ಯಾಂಕಿನಿಂದ ಸಲ್ಲಿಸಲ್ಪಡುವ ಸೇವೆಗಳು ಅನೇಕ ಮತ್ತು ಹಲವು ವಿಧಗಳಲ್ಲಿ ಇರುತ್ತವೆ. ಆಧುನಿಕ ಆರ್ಥಿಕ ಮತ್ತು ಕೈಗಾರಿಕೆಯ ಜೀವಾಳವು ಬ್ಯಾಂಕುಗಳ ಸಹಾಯವಿಲ್ಲದೆ ಈ ವರೆಗೆ ನಡೆದಂತೆ, ಹೇಗೆ ಬೆಳೆಯಬಲ್ಲುದು ಎಂಬ ಸಂಗತಿಯನ್ನು ಎಣಿಸಲು ಸಾಧ್ಯವಿಲ್ಲ. ನಮ್ಮಲ್ಲಿ ಹಲವರಿಗೆ "ಬ್ಯಾಂಕ್ ಮನೋವೃತ್ತಿ"ಯ ಕೊರತೆಯು ಇದೆ. ಇದು ಒಂದು ಖೇದಾಸ್ಪದ ವಿಷಯವಾಗಿದೆ. ಬ್ಯಾಂಕಿನಲ್ಲಿ ಲೆಖ್ಖಾಚಾರ ವಹಿವಾಟುಗಳನ್ನು ನಡೆಸುವುದರಿಂದ ಸಿಗುವ ಪ್ರಯೋಜನಗಳೇನೆಂಬ ಪ್ರಶ್ನೆಯನ್ನು ಜನತೆಯ ಮುಂದಿಟ್ಟರೆ ಶೇಕಡಾ ೯೦ರಷ್ಟು ಮಂದಿಯು ಇದಕ್ಕೆ ಸಮರ್ಪಕವಾದ ಉತ್ತರವನ್ನು ಕೊಡಲಾರರು. ಇನ್ನೂ ಕೆಲವರು ಒಂದು ಯಾ ಎರಡಕ್ಕಿಂತ ಹೆಚ್ಚಿಗೆ ಹೇಳಲಾರರು. ಇದರ ಸತ್ಯಾಂಶವಾದರೂ ಏನಿರಬಹುದು? ಬ್ಯಾಂಕುಗಳು ತಮ್ಮ ಗಿರಾಕಿಗಳಿಗೆ ಸಲ್ಲಿಸುವ ಅನೇಕ ಸೇವೆಗಳ ವಿಚಾರದ ಕಡೆಗೆ ಜನಸಾಮಾನ್ಯರು ಗಮನವನ್ನೇ ಕೊಡಲಿಲ್ಲ. ಅಲ್ಲದೆ ಅದರ ತಿಳಿವೇ ಅವರಿಗಿಲ್ಲವೆಂತ ತೋರುತ್ತದೆ. ಇಂತಹ ಮಗ್ಗಾಟದ ದಿನಗಳಲ್ಲಿ ಪ್ರತಿಯೊಬ್ಬ ವ್ಯಾಪಾರಿಯೂ ಬ್ಯಾಂಕುಗಳು ಎಷ್ಟರ ವರೆಗೆ ತಮ್ಮ ಸೇವೆಯನ್ನು ಕೊಡಲು ತಯಾರಾಗಿವೆ ಎಂಬ ವಿಷಯವನ್ನು ಗ್ರಹಿಸುವುದು ಒಂದು ಪ್ರಾಮುಖ್ಯ ಸಂಗತಿಯಾಗಿದೆ.

ಬ್ಯಾಂಕು ವ್ಯವಹಾರದಿಂದ ಸಿಗುವ ಪ್ರಯೋಜನಗಳು

ಬ್ಯಾಂಕಿನಲ್ಲಿ ಲೆಖ್ಖಾಚಾರವನ್ನು ಇಡುವುದರಿಂದ ಅನೇಕ ಪ್ರಯೋಜನಗಳನ್ನು ಜನರು ಹೊಂದಬಹುದು. ಮೊದಲನೆಯದಾಗಿ ಒಂದು ಪ್ರಸಿದ್ಧ ಬ್ಯಾಂಕಿನಲ್ಲಿ ಒಬ್ಬನ ಲೆಖ್ಖಾಚಾರಗಳಿದ್ದರೆ ಆತನ ಮಾನಮರ್ಯಾದೆಯೂ ಹೆಚ್ಚುವುದು. ಆತನಿಗೂ ಇತರರಿಗೂ ಇರುವ ವ್ಯವಹಾರ ಸಂಬಂಧಗಳಲ್ಲಿ ತನ್ನ ಲೆಖ್ಖಾಚಾರವು ಅಂತಹ ಪ್ರಸಿದ್ಧ ಬ್ಯಾಂಕಿನಲ್ಲಿದೆ ಎಂದು ದಾಖಲೆಕೊಡುವುದೇ ಆತನಿಗೆ ಒಂದು ದೊಡ್ಡ ಸೊತ್ತೇ ಆಗುವುದು. ತಮ್ಮಲ್ಲಿರುವ ಆತನ ವಹಿವಾಟು ಲೆಖ್ಖ ವಗೈರೆ ತೃಪ್ತಿಕರವಾಗಿದೆ ಎಂದು ಬ್ಯಾಂಕು ತನ್ನ ಗಿರಾಕಿಗಾಗಿ ವರದಿಯನ್ನು ಕೊಟ್ಟರೆ, ಅಂಥ ಗಿರಾಕಿಯ ಆರ್ಥಿಕ ಪರಿಸ್ಥಿತಿಯೂ ಕೂಡಾ ಹೆಚ್ಚುವುದು.

ಬಚ್ಚಿಟ್ಟ ನಿಧಿಗಿಂತಲೂ ಬ್ಯಾಂಕಿನಲ್ಲಿಟ್ಟ ಧನವು ಸುರಕ್ಷಿತವೆಂದು ಬೇರೆ ಹೇಳಬೇಕಾಗಿಲ್ಲ. ಯಾರಿಗೂ ತಿಳಿಯದ ಹಾಗೆ ಗುಪ್ತಸ್ಥಳಗಳಲ್ಲಿ ಅಡಗಿಸಿಡುವ ನಗನಾಣ್ಯಗಳೂ ಕಾಗದದ ನೋಟುಗಳೂ, ಅನೇಕ ಬಾರಿ ಕಳೆದುಹೋಗುವುವು ಯಾ ನಾಶವಾಗುವುವು. ಇಂತಹ ಸಂದರ್ಭಗಳು ಸಾಮಾನ್ಯವಾಗಿರುವುವು. ಅಲ್ಲದೆ ಇರುವೆಗಳಿಂದಲೂ ಹವಾಗುಣದ ದೆಸೆಯಿಂದಲೂ ಕರೆನ್ಸಿನೋಟುಗಳು ಹಾಳಾಗಿಹೋಗುವ ಯಾ ಭಿನ್ನವಾಗುವ ಸಂದರ್ಭಗಳು ಹಲವಾರು ಇವೆ. ವ್ಯವಹಾರ ವಠಾರಗಳಲ್ಲಿಯೂ, ಮನೆಮಠಗಳಲ್ಲಿಯೂ ಶೇಖರಿಸಿಡುವ ಹಣವು ಆಗಾಗ್ಗೆ ಕಳ್ಳತನಕ್ಕೆ ಅನುಕೂಲವಾಗಿಯೇ ಇರುವುದರಿಂದ ಅದು ಆತುರಕ್ಕೂ ಚಿಂತೆಗೂ ಆಸ್ಪದವನ್ನುಂಟುಮಾಡುತ್ತದೆ. ಇದನ್ನೆಲ್ಲಾ ತಿಳಿದು ಅಮೇರಿಕಾ ಮತ್ತು ಯುರೋಪು ದೇಶಗಳಲ್ಲಿ ಬ್ಯಾಂಕುಗಳು "ರಾತ್ರಿಯ ಸಂರಕ್ಷಣೆ" ಎಂಬ ಹೊಸ ಯೋಜನೆಯನ್ನು ಜಾರಿಗೆ ತಂದಿರುತ್ತಾರೆ. ಆಕಾರದಲ್ಲಿಯೂ ನೋಟದಲ್ಲಿಯೂ ಒಂದು ಟಪ್ಪಾಲು ಪೆಟ್ಟಿಗೆಯಂತಿದ್ದು ಬ್ಯಾಂಕಿನ ವಠಾರದಲ್ಲಿ ಗೋಡೆಗೆ ಭದ್ರವಾಗಿ ಹೊಂದಿಸಿಕೊಂಡು ಇಡುವಂಥಾ ಈ ಸುರಕ್ಷಿತ ಟ್ರೆಜರಿಗಳನ್ನು ಕಾಣಬಹುದು. ಬಹಳ ಚಾತುರ್ಯದಿಂದ ರಚಿಸಲ್ಪಟ್ಟಿರುವುದರಿಂದ ಅವುಗಳಲ್ಲಿಟ್ಟ ಹಣವು ಬೀಗ ಮುದ್ರಿತವಾಗಿ ಬಹಳ ಸುರಕ್ಷಿತವಾಗುತ್ತದೆ.

ಚಕ್ ಮೂಲಕ ಹಣ ಪಾವತಿ ಮಾಡುವುದರಿಂದ ಎಷ್ಟೋ ಪ್ರಯೋಜನಗಳಿವೆ. ಕಾರಣ ಅದು ಬಹಳ ಅನುಕೂಲವಾಗಿದೆ. ಅಲ್ಲದೆ ಹಣಪಾವತಿ ಬಗ್ಗೆ ರಶೀದಿಯು ತನ್ನಷ್ಟಕ್ಕೆ ಒದಗಿಸಲ್ಪಟ್ಟಂತಾಗುವುದು. ಹಣದ ವ್ಯವಹಾರಕ್ಕಿಂತಲೂ ಸುಲಭವಾಗಿಯೂ ಸುರಕ್ಷಿತವಾಗಿಯೂ ಚಕ್ ಪುಸ್ತಕವನ್ನು ಕೊಂಡುಹೋಗಬಹುದು, ಗಿರಾಕಿಯು ಬ್ಯಾಂಕಿನಲ್ಲಿ ಯಾ ಬ್ಯಾಂಕಿನ ಮುಖಾಂತರ ನಡೆಸುವ ಯಾವತ್ತೂ ವ್ಯವಹಾರಗಳ ನಕಲನ್ನು ಬ್ಯಾಂಕಿನವರಿಂದ ಗಿರಾಕಿಗಳಿಗೆ ಕೊಡಲ್ಪಡುವ 'ಪಾಸ್' ಪುಸ್ತಕದಲ್ಲಿ ಕ್ರಮವಾಗಿ ಬರೆಯಲ್ಪಡುತ್ತದೆ. ಇದರಿಂದ ಗಿರಾಕಿಯು ಪ್ರತ್ಯೇಕವಾದ ಲೆಖ್ಖವನ್ನು ಇಡುವ ಅಗತ್ಯವಿಲ್ಲ. ಇದ್ದರೂ ಬಹಳ ಮಟ್ಟಿಗೆ ಕಮ್ಮಿ ಆಗುತ್ತದೆ.

ಸಾಲಗಳು

ವ್ಯಾಪಾರಿಗಳಿಗೂ ಕೈಗಾರಿಕೆ ಸಂಸ್ಥೆಗಳಿಗೂ ಬ್ಯಾಂಕು ಹಣವನ್ನು ಒದಗಿಸುತ್ತದೆ. ಕೇಳಿದಾಗ್ಗೆ, ಯಾ ಸ್ವಲ್ಪ ಸಮಯದ ನಂತರ ಯಾ ನಿಶ್ಚಿತ ಅವಧಿಯ ಮೇಲೆ ಪರತುಕೊಡುವ ಶರ್ತದ ಮೇಲೆ ಸ್ವೀಕರಿಸೋಣಾದ ಠೇವಣಾತಿ ಹಣವನ್ನು ಬ್ಯಾಂಕು ಇತರರಿಗೆ ಸಾಲದ ರೂಪದಲ್ಲಿ ಕೊಡುತ್ತದೆ. ಸಾಲಗಳನ್ನು ಕೊಡುವಾಗ ಬ್ಯಾಂಕು ಕೆಲವು ವಿಷಯಗಳನ್ನು ತನ್ನ ಹಿತದೃಷ್ಟಿಯಿಂದ ಜನ್ಯಾಗಿ ಆಲೋಚಿಸಬೇಕು. ಮೊದಲನೆಯದಾಗಿ ಹೊರಗೆ ಕೊಡುವ ಸಾಲಕ್ಕೂ ಠೇವಣಾತಿಗಳಿಗೂ ಒಂದು ದಾಮಾಶಯವಿದ್ದು ಅದು ಒಂದು ಕ್ರಮವಾದ ಮಿತಿಯೊಳಗಿರತಕ್ಕದ್ದು. ಎರಡನೆಯದಾಗಿ ಸಾಲಗಳು ಸುಲಭವಾಗಿ ಹಿಂದೆ ಸಿಗುವಂಥಾದ್ದಾಗಬೇಕು. ಮೂರನೆಯದಾಗಿ ಸಾಲ ಪಡಕೊಳ್ಳುವವನು ಸಮೃದ್ಧನೋ ಯೋಗ್ಯನೋ ಎಂಬುದರ ಕುರಿತು ಬ್ಯಾಂಕಿಗೆ ತೃಪ್ತಿಕರವಾದ ಅಭಿಪ್ರಾಯ ಏರಬೇಕು. ಆದುದರಿಂದ ಸಾಲಗಳನ್ನು ಅಪೇಕ್ಷಿಸಿದಲ್ಲಿ, ಗಿರಾಕಿಯು ಸಾಲವನ್ನು ಯಾವ ಬಗ್ಗೆ ಅಪೇಕ್ಷಿಸುತ್ತಿದೆ ಮತ್ತು ಆ ಸಾಲವನ್ನು ಯಾವ ಆಧಾರದ ಮೇಲೆ ಪರತುಕೊಡುವನು ಎಂಬ ಪ್ರಶ್ನೆಗಳನ್ನು ಕೇಳತಕ್ಕದ್ದು. ಅರ್ಜಿದಾರನ ಆರ್ಥಿಕ ಸ್ಥಿತಿಯು ಪ್ರಕೃತ ಹೇಗೆ ಇದೆ ಎಂಬುದನ್ನು ಕೂಡಾ ವಿಚಾರಿಸಬೇಕು. ಇಂತಹ ಪ್ರಸಂಗಗಳಲ್ಲಿ ಅರ್ಜಿದಾರ ಗಿರಾಕಿಗೆ ಯಾವುದಾದರೊಂದು ಬ್ಯಾಂಕಿನಲ್ಲಿ ಲೆಖ್ಖಾಚಾರವಿದ್ದರೆ, ಬಹಳ ಉತ್ತಮವಾಗುತ್ತದೆ.

ಇತರ ಚಿಕ್ಕ ಸಣ್ಣ ಸೇವೆಗಳು

ಬ್ಯಾಂಕು ಯಾವುದಾದರೊಂದು ಯಾ ಯಾರಾದರೊಬ್ಬನ ಲೆಖ್ಖದ ಪರವಾಗಿ ಚೆಕ್, ಬಿಲ್, ಡ್ರಾಫ್ಟ್, ಪೋಸ್ಟಲ್ ಆರ್ಡರ್ ಮೊದಲಾದುವುಗಳನ್ನು ಸ್ವೀಕರಿಸಿ ಕ್ರಮವಾಗಿ ಲೆಖ್ಖಕ್ಕೆ ಜಮಾಮಾಡುವುದು ಮಾತ್ರವಲ್ಲದೆ, ಗಿರಾಕಿಗಳ ಲೆಕ್ಕದಿಂದ ಅವರ ಪರವಾಗಿ ವಿಮಾಕಂತು, ತೆರಿಗೆ, ವರ್ಗಣಿ ಮುಂತಾದ ಸಣ್ಣ ದೊಡ್ಡ ಪಾವತಿಗಳನ್ನು ಗಿರಾಕಿಗಳ ಅನುಜ್ಞೆ ಮೇರೆಗೆ ಸಲ್ಲಿಸುತ್ತದೆ. ಈ ಸೇವೆಯ ಪ್ರತಿಫಲವಾಗಿ ಬ್ಯಾಂಕು ಅಲ್ಪಸ್ವಲ್ಪ ಹಣವನ್ನು ಗಿರಾಕಿಗಳಿಂದ ಪಡೆಯುತ್ತದೆ. ಏನೂ ಪ್ರತಿಫಲ ಎಲ್ಲದೆ ಕೇವಲ ಸೇವೆ ಮಾತ್ರ ಮಾಡುವ ಲೋಕೋಪಕಾರಿ ಸಂಸ್ಥೆಗಳಂತೆ ಬ್ಯಾಂಕಿಗೆ ವರ್ತಿಸಲು ಅನುಕೂಲವಿಲ್ಲ. ಕರಾರುಪತ್ರ, ನಗನಾಣ್ಯ ಮುಂತಾದುವುಗಳನ್ನು ಸುರಕ್ಷಿತವಾಗಿಡುವ ಯೋಜನೆಯು ಬ್ಯಾಂಕಿನ ಮತ್ತೊಂದು ಅಮೂಲ್ಯವಾದ ಸೇವೆಯು. ಇಂತಹ ಸೇವೆಯನ್ನು ಬ್ಯಾಂಕು ಜನಸಾಮಾನ್ಯರಿಗೆ ಈಗೀಗ ಹೆಚ್ಚು ಹೆಚ್ಚಾಗಿ ಸಲ್ಲಿಸುತ್ತ ಬರುತ್ತದೆ ಎಂಬುದು ಸಂತೋಷಕರವಾದ ಹಾಗೂ ಹೆಮ್ಮೆಯ ವಿಷಯವಾಗಿದೆ. ಇದೇ ಗುರಿಯನ್ನು ತನ್ನ ಧ್ಯೇಯವಾಗಿಟ್ಟುಕೊಂಡು, ಕೆನರಾ ಬ್ಯಾಂಕು ಪ್ರಸಿದ್ಧ ವ್ಯವಹಾರೀ ಕ್ಷೇತ್ರಗಳಲ್ಲಿ ಹರಡಿರುವ ತನ್ನ ೩೭ ಶಾಖೆಗಳ ಮುಖಾಂತರ ಸಾವಿರಾರು ಗಿರಾಕಿವೃಂದಕ್ಕೆ ತನ್ನಿಂದ ಕೂಡಿದಷ್ಟು ಸಾಮರ್ಥ್ಯದಿಂದ ಆಧುನಿಕ ಹಾಗೂ ಆದರ್ಶಸೇವೆಯನ್ನು ಸದಾ ಸಲ್ಲಿಸಲು ಪ್ರಯತ್ನಿಸುತ್ತದೆ.

ಸಹಕಾರಭಾವ — ಸಹೋದರಭಾವ

ಬ್ಯಾಂಕ್ ವ್ಯವಹಾರದಿಂದ ನಿಮ್ಮಲ್ಲಿ ಸಹಕಾರಭಾವ—ಸಹೋದರಭಾವಗಳುತ್ಪನ್ನವಾಗುತ್ತವೆ. ಸಮಾಜದಲ್ಲಿ ನಿಮ್ಮ ಪ್ರತಿಷ್ಠೆ ಬೆಳೆಯುವುದು. ನೀವು ಹೊಸ ಹೊಸ ಸ್ನೇಹಿತರನ್ನು ಕೂಡಿಸಿಕೊಳ್ಳುವಿರಿ!

ಈ ದಿನವೇ ಬ್ಯಾಂಕಿನಲ್ಲಿ ನಿಮ್ಮ ಲೆಕ್ಕವನ್ನಾರಂಭಿಸಿರಿ!

ಕೆನರಾ ಬ್ಯಾಂಕ್, ಲಿಮಿಟೆಡ್.
ಸ್ಥಾಪನೆ: 1906.

ದಿವಂಗತ ಶ್ರೀ। ಸುಬ್ರಾವ್ ಪೈಗಳ ಜೀವನ ಚರಿತ್ರೆ!

(೧೩ನೇ ಪುಟದಿಂದ ಮುಂದುವರಿದುದು)

ಮಾನ್ಯರಿಗೆ ನಮ್ಮ ಸನಾತನ ಧರ್ಮದಲ್ಲಿ ತುಂಬಾ ಶ್ರದ್ಧೆ. ಶುದ್ಧ ಆಸ್ತಿಕರೂ ಧರ್ಮಾವಲಂಬಿಗಳೂ ಆಗಿದ್ದು ಸಂಕುಚಿತ ಶಾಸ್ತ್ರಾನುಸರಣವನ್ನು ಅವರು ಮೆಚ್ಚುತ್ತಿದ್ದಿಲ್ಲ. ಅಹಂಭಾವವಾಗಲೀ ಡಂಭಾಚಾರವಾಗಲೀ ಅವರಿಗೆ ಸಹಜವಾಗುತ್ತಿದ್ದಿಲ್ಲ. ಮಹಾನುಭಾವರ ಸಂಭಾಷಣೆಗಳ ಒಂದು ವಿಶೇಷತ್ವವೆಂದರೆ— "ನಾನು" ಎಂಬ ಶಬ್ದದ ಅಭಾವವೇ. ಮತ್ತವರ ವಿಶಾಲ ಪುಸ್ತಕಜ್ಞಾನವೂ ರಸಿಕಮಾತುಗಳೂ ಸರಸವಾದ ನುಡಿಗಳೂ ಅವರ ಸಂಭಾಷಣೆಯನ್ನು ಅಮೂಲ್ಯವೆಂದೆಣಿಸುತಿದ್ದುವು.

ತಾರುಣ್ಯದಿಂದಲೂ ಮಾನ್ಯರಿಗೆ ವಾತರೋಗವಿತ್ತು. ಅದರಿಂದಾಗಿ ಆಗಿಂದಾಗ್ಗೆ ಬಹಳ ಕಷ್ಟಗಳನ್ನನುಭವಿಸುತಿದ್ದರಾದರೂ, ಆ ಯಾತನೆಯನ್ನು ಮಾತಿಲ್ಲದೆ ಸಹಿಸುತಿದ್ದರು. ಕಡೆಗೆ ತಮ್ಮ ಬರೇ ೫೭ನೇ ವರ್ಷದಲ್ಲಿ ಬಡವರ ಬಂಧುಗಳಂತಿದ್ದ ಈ ಮಹಾನುಭಾವರು ಹಿಂದುಗಳಿಗೆಲ್ಲಾ ಪವಿತ್ರವಾದ ನಾರಾಯಣ ಮಂತ್ರವನ್ನು ಉಚ್ಚರಿಸುತ್ತಾ ೧೯೬೯ನೇ ಇಸವಿ ಜುಲ್ಯಾ ತಾರೀಕು ೫೫ನೇ ದಿನ ಇಹಲೋಕವನ್ನು ತ್ಯಜಿಸಿದರು. ಗೌಡ ಸಾರಸ್ವತ ಸಮಾಜದ ಮತ್ತು ನಮ್ಮ ದಕ್ಷಿಣ ಕನ್ನಡದ ಒಂದು ದಿವ್ಯ ಜ್ಯೋತಿಯೇ ಮಾಯವಾದಂತಾಯಿತು. ಮಾನ್ಯರ ಸ್ಮಶಾನಯಾತ್ರೆಯಲ್ಲಿ ಅವರ ಕಳೇಬರವನ್ನು ಜಾತಿಮತ ಭೇದವೆಣಿಸದೆ ಸಹಸ್ರಗಟ್ಟಲೆ ಪುರಜನರು ಹಿಂಬಾಲಿಸಿದರು. ಅವರ ಯೋಗ್ಯತೆಗೂ ಜನಪ್ರಿಯತೆಗೂ ಇದೊಂದು ಪವಿತ್ರ ನಿದರ್ಶನವಲ್ಲವೇ?

ರೂಪಾಯಿ–ಆಣೆ–ಪೈ ಎಂದರೆ ಜಗತ್ತಿನ ತ್ರಿಮೂರ್ತಿಗಳು. ಮೂವರಲ್ಲಿ ಯಾವುದು ದೊಡ್ಡದೆಂದು ಹೇಳಬರುವುದಿಲ್ಲ. ಮೂರನ್ನೂ ಪೂಜಿಸು.

ಸರ್ವಜ್ಞನ ಪದಗಳು

ಆಗ ಬಾ ಈಗ ಬಾ ಹೋಗಿ ಬಾ
ಯೆನ್ನದೆ।
ಆಗಲೇ ಕರೆದು ಪಡೆವವನ ಕಾಸು ಹೊ।
ನ್ನಾಗದೇ ಬಿಡದು ಸರ್ವಜ್ಞ ॥ ೧ ॥
ಕೂಡಿಡುತ್ತ ಬಿಡದವನು ರೂಢಿಯೊಳ
ಗುತ್ತಮನು।
ಕೂಡಿದರು ಬಿಡುವವನು ಮಧ್ಯಮನು
ಅಧಮ ತಾ।
ಕೂಡಿಡದೆ ಬೇಡುವನು ಸರ್ವಜ್ಞ ॥ ೨ ॥
ಮುತ್ತು ಕೊರಳಿಗೆ ಚೆಂದ,
ಹುತ್ತ ಹಾವಿಗೆ ಚಂದ,
ಸೊತ್ತು ಸಕಲರಿಗಂದ ಸರ್ವಜ್ಞ ॥ ೩ ॥

ಬ್ಯಾಂಕುಗಳಿಗೂ ಜನತೆಗೂ ಇರುವ ನಿಕಟ ಸಂಬಂಧ

ಅನ್ಯಾಯವಾದ ಟೀಕೆಗಳನ್ನು ಸಮಾಜ ಹಿತೇಚ್ಛುವು ಕಾದಾಡಬೇಕು

ಬ್ಯಾಂಕಿಂಗ್ ಸ್ನೇವೆಯಷ್ಟು ಉತ್ಕೃಷ್ಟ ಸೇವೆ ಮತ್ತೊಂದಿಲ್ಲ

●

ಲೇಖಕರು: ಶ್ರೀ। ಎಚ್. ವಿ. ಕೈ.

ಯೋಗ್ಯ, ಸುದೃಢ ಬೇಂಕು ಯಾವ ಜನತೆಗೂ ಬಹು ಪ್ರಯೋಜನಕಾರಿಯೂ ಆಧಾರವುಳ್ಳದೂ ಆಗಿದೆ. ಜನರ ಆರ್ಥಿಕ ಸುವ್ಯವಸ್ಥೆಯೊಡನೆ ಇಂತಹ ಬ್ಯಾಂಕುಗಳಿಗೆ ಸಂಬಂಧವಿದೆ. ಮತ್ತು ಇಂತಹ ಸಂಬಂಧವು ಅವಶ್ಯವೂ ಇದೆ. ಜನತೆಯ ಅಭಿವೃದ್ಧಿಗೆ ಯೋಗ್ಯ ಬ್ಯಾಂಕುಗಳು ಕಾರಣವಾಗುವುವು. ಜನರ ಆರ್ಥಿಕ ಅಭಿವೃದ್ಧಿ-ಕ್ಷೀಣಗಳು ಒಳ್ಳೇ ಬ್ಯಾಂಕುಗಳೊಡನೆ ಪೋಣಿಸಿಯೇ ಇವೆ.

ಬ್ಯಾಂಕು ಜನರ ದುಡಿತದ ಉಳಿಕೆಯ ಹಣವನ್ನು ಸಂಗ್ರಹಿಸಿ, ಇತರರಿಗೂ ಅದರ ಪ್ರಯೋಜನವನ್ನು ಕೊಡಲು ಉಪಯೋಗಿಸುವುದು. ಜನರು ತಮ್ಮ ಹಣವನ್ನು ಬಡ್ಡಿಯಿಲ್ಲದೆ ಎಲ್ಲೆಲ್ಲಿ ನೆಲದಲ್ಲೆ ಹೂತಿಟ್ಟು ಕೆಲುಬು ಹಿಡಿಯಲು ಬಿಡದಂತೆ ಬ್ಯಾಂಕು ತನ್ನ ಸುಭದ್ರ ಕೋಟೆಯೊಳಗೆ ಆ ಹಣವನ್ನು ಪಡೆದು ಕಾಪಾಡುವುದು. ಕಾಪಾಡುತಿದ್ದಂತೆ ಇಟ್ಟಲ್ಲೆ ಬೆಳೆದು ಬರಲು ಸಹಾಯ ಮಾಡುವುದು. ಜನರು ಬ್ಯಾಂಕುಗಳಲ್ಲಿ ಹಣವಿಟ್ಟು ಚೋರಭಯ ಅಗ್ನಿಭಯಗಳಿಲ್ಲದೆ ನೆಮ್ಮದಿಯಾಗಿರಬಹುದು. ಅದರಂತೆ ಆ ಹಣವು ತಮ್ಮ ಮನೆಯೊಳಗಿದ್ದಂತೆಯೇ ಭಾವಿಸಿ, "ಚೆಕ್ಕು" ಅಥವಾ "ಬ್ಯಾಂಕ್ ಆರ್ಡರ್"ಗಳಿಂದ ಪಡೆಯಬಹುದು. ಈ ತೆರನ ಅನುಕೂಲತೆ-ಭದ್ರತೆ—ಭರವಸೆಗಳನ್ನು ಬ್ಯಾಂಕು, ಜನರಿಗೆ ಕೊಡುವುದು.

ಬ್ಯಾಂಕುಗಳಲ್ಲಿ ಖಾತೆಯಿದ್ದವನ ಇಯತ್ತೆಯೂ ಹೆಚ್ಚುವುದು. ಜೀವನ ಸಂಗ್ರಾಮದಲ್ಲಿ ಅವನು ಯಶಸ್ವಿ; ಮಾನಿತನು.

ಯಾವ ಉದ್ಯೋಗ-ದಂಧೆಗಳೇ ಇರಲಿ, ಬ್ಯಾಂಕುಗಳ ಸಂಬಂಧವು ಒಂದಲ್ಲ ಒಂದು ರೀತಿಯಲ್ಲಿ ಆ ಉದ್ಯೋಗ ಅಥವಾ ದಂಧೆಗೆ ಇರುತ್ತದೆ. ಪ್ರತಿಯೊಬ್ಬನೂ ಬ್ಯಾಂಕಿನ ಉಪಯೋಗ-ಸೇವೆಗಳನ್ನು ಪಡೆಯುತಿದ್ದಾನೆ. ಉದ್ಯೋಗ-ವ್ಯಾಪಾರಗಳು ಬೆಳೆದಂತೆ ಬ್ಯಾಂಕಿನ ಪ್ರಯೋಜನವೂ ಹೆಚ್ಚುತ್ತಿದೆ. ಒಂದೂರಿನ ಹಲವು ಬ್ಯಾಂಕುಗಳು ಆ ಊರಿನ ವ್ಯಾಪಾರೋದ್ಯೋಗಗಳ ಉನ್ನತಿಯನ್ನು ಸೂಚಿಸುತ್ತವೆ.

ಈ ವಿಷಯವನ್ನು ನೀವು ಮನನ ಮಾಡುತಿದ್ದಂತೆ ನಿಮಗೆ **ಬ್ಯಾಂಕುಗಳ ಸೇವೆಗೆ ಸರಿಸಾಟಿಯಾದುದು ಮತ್ತೊಂದಿಲ್ಲ** ಎಂಬುದನ್ನು ತಿಳಿಯುವಿರಿ.

ಅದುಕಾರಣ, ಬ್ಯಾಂಕು, ಜನತೆಗೆ ಮಾಡುವ ಉಪಕಾರಕ್ಕೆ ಪ್ರತಿಯಾಗಿ ಜನತೆಯು ಆ ಬ್ಯಾಂಕು ಅಥವಾ ಬ್ಯಾಂಕುಗಳನ್ನು ಯೋಗ್ಯರೀತಿಯಿಂದ ಕಾಣಬೇಕಾಗಿದೆ. ಇದನ್ನು ಬಿಟ್ಟು ಆಧಾರವಿಲ್ಲದ ಸುಳ್ಳು ಸುದ್ದಿಗಳನ್ನು ನಂಬಿ, ಸಾರವಿಲ್ಲದ ತುಚ್ಛನಿಂದೆ ಮಾಡುವುದೂ, ಟೀಕೆಮಾಡುವುದೂ ಅಯೋಗ್ಯಕರವೆನಿಸುವುದು. ಸಂಸ್ಥೆಯು ಜನತೆಯ ಪ್ರಯೋಜನಕ್ಕಾಗಿರುವುದು ಎಂಬುದನ್ನು ಪ್ರತಿಯೊಬ್ಬ ವಿಮರ್ಶಕನು ತಿಳಿಕೊಂಡಲ್ಲಿ ಅಂತಹ ಅನಾರೋಗ್ಯಕರ ಟೀಕೆಗಳಿಗೆ ಯಾರೂ ಹೊರಡಲಾರರು.

ಯೋಗ್ಯವಾದ ಬ್ಯಾಂಕಿಗೆ ನೈತಿಕ ಹಾಗೂ ವ್ಯವಹಾರ ಸಂಬಂಧವಾದ ಬೆಂಬಲ ಕೊಡುವುದು ಪ್ರತಿಯೋರ್ವನ ಕರ್ತವ್ಯವಾಗಿದೆ. ಹಾಗೂ ಅವರವರ ಆರ್ಥಿಕ ಸುಧಾರಣೆ ಭದ್ರತೆಗಳ ದೃಷ್ಟಿಯಿಂದಲೂ ಹಿತಕರವಾಗಿದೆ

ಅಲಸಿಗಳು ನಿಂದಕರು ಮಾಡುವ ಅನ್ಯಾಯವಾದ ಟೀಕೆಗಳಿಂದ ಕೆಲವು ಜನರಲ್ಲಿ ಬ್ಯಾಂಕಿನ ವಿಷಯ ತಪ್ಪು ಅಭಿಪ್ರಾಯಗಳಾಗುವುದುಂಟು. ಅಲೋಚನಾ ಶಕ್ತಿಯಿಲ್ಲದ ಅಥವಾ ಸರಿಯಾಗಿ ವಿಷಯವನ್ನು ತಿಳಿಕೊಳ್ಳದ ಕೆಲವರೂ ಅಂತಹ ಟೀಕೆಗೆ ತೊಡಗುವುದುಂಟು. ಜನತೆಯ ಹಿತವಿದ್ದ ಮನುಷ್ಯನು ಇಂತಹ ನಿರಾಧಾರ ಹಾಗೂ ಅನ್ಯಾಯದ ಸುದ್ದಿ ಮತ್ತು ಅಪ ಪ್ರಚಾರವನ್ನು ತಡೆದು ಜನರಲ್ಲಿ ಸದಭಿಪ್ರಾಯವನ್ನು ಸಾರಲು ಯತ್ನಿಸಬೇಕು.

ಹೀಗೆ-ಒಂದು ಯೋಗ್ಯ, ಬ್ಯಾಂಕಿನ ವಿಷಯದಲ್ಲಿ ಅದರ-ಅಭಿಮಾನಗಳನ್ನು ವ್ಯಕ್ತ ಮಾಡುವವನು ನಿಜವಾಗಿ ಜನತೆಗೆ ಉಪಕಾರ ಮಾಡುವವನು. ಇಂತಹ ಯೋಗ್ಯ ಮನುಷ್ಯರಿಂದ ಯೋಗ್ಯ ಬ್ಯಾಂಕುಗಳು ಜನತೆಗೆ ತಮ್ಮ ಯೋಗ್ಯ ಸೇವೆ ಸಲಿಸುವುವು.

ಮಾತಿನ ಮಾಲೆ

ಬೆಕ್ಕಿಗೆ ಒಂಭತ್ತು ಪ್ರಾಣಗಳಿವೆ ಎನ್ನುತ್ತಾರೆ. ಆದರೆ ಒಂದು ಪ್ರಾಣವನ್ನಾದರೂ ಅದು ಅಲಕ್ಷಿಸುವುದಿಲ್ಲ. ಮನುಷ್ಯನಿಗಿರುವುದೊಂದೇ; ಆದರೆ ಅಪಾಯಗಳಿಗೆ ಕಣ್ಣುಮುಚ್ಚಿ ಕೊಂಡಿರುತ್ತಾನೆ.

* * * *

ಕೆನರಾ ಬ್ಯಾಂಕಿನ ಚಿಕ್ಕದೊಂದು ಚರಿತ್ರೆ

(೧೧ನೇ ಪುಟದಿಂದ ಮುಂದುವರಿದುದು)

ತನಕ ಈ ಬೇಂಕಿಗೆ ಚಿಕ್ಕಾಸೊಂದು ನಷ್ಟ ಬಂದಿದ್ದಿಲ್ಲ. ಆದರೆ ೧೯೩೯ನೇ ವರ್ಷದಲ್ಲಿ ನಿಗಂತದಲ್ಲಿ ಆರ್ಥಿಕ ಕಾರ್ಮುಗಿಲುಗಳು ಮೂಡಿದುವು. ಆ ಚಂಡಮಾರುತವು ಬೀಸುವ ಮೊದಲೇ ಪ್ರಾಜ್ಞನಾವಿಕನಂತೆ ಈ ನಮ್ಮ ಚಿಕ್ಕ ಬೇಂಕಿನ ಆಗಿನ ಆಡಳಿತೆ ಮಂಡಳದ ಡೈರೆಕ್ಟರರು ತಮ್ಮ ನಾವೆಯನ್ನು ಸುಸಜ್ಜಿತಪಡಿಸಿದುದರಿಂದ, ಈಶನ ಕೃಪೆಯಿಂದ ಏನೊಂದೂ ಹಾನಿಯಿಲ್ಲದೆ ಈ ಬೇಂಕು ಕರೆಸೇರಿತು. ಈ ಹತ್ತು ವರ್ಷಗಳ ಅಂತರದಲ್ಲಿ ಅಪರಿಮಿತ ಬೇಂಕುಗಳು ಮುರಿದುಬಿದ್ದುವು. ಮುಖ್ಯವಾಗಿ ಪ್ರಖ್ಯಾತಿಪಟ್ಟ ಟ್ರಾವನ್ ಕೋರ್ ನೆಶನಲ್ ಎಂಡ್ ಕ್ವಿಲ್ಲನ್ ಬೇಂಕ್ ೧೯೩೮ರಲ್ಲಿ ತನ್ನ ಕಾರ್ಯಕ್ರಮವನ್ನು ನಿಲ್ಲಿಸಿ ಕದವನ್ನು ಮುಚ್ಚಿತು. ಅದರಿಂದಾಗಿ ಆಗಿನ ಪರಿಸ್ಥಿತಿಯು ತುಂಬಾ ಭಯಾಸ್ಪದವಾಗಿ ಮದ್ರಾಸಿನ ಆಗಿನ ಮುಖ್ಯ ಸಚಿವರ್ಯರಾದ ಮಾನ್ಯ ಶ್ರೀ। ರಾಜಗೋಪಾಲಾಚಾರ್ಯರು ಜನತೆಗೆ ಅಭಯ ದಾನವನ್ನು ಕೊಡಬೇಕಾಗಿ ಕೂಡಾ ಬಂತು. ಮಾನ್ಯರು ೧೯೩೮ನೇ ಜೂನ್ ತಾರೀಕು ೨೫ರಲ್ಲಿ ಮದ್ರಾಸು ಸಂಸ್ಥಾನದ ಪ್ರಾಮುಖ್ಯ ಬೇಂಕುಗಳ ಲೆಕ್ಕಪತ್ರಗಳನ್ನು ರಿಜರ್ವ್ ಬೇಂಕಿನವರಿಂದ ಪರೀಕ್ಷಿಸಲ್ಪಡುವ ಬಗ್ಗೆ ಮದ್ರಾಸು ಸರಕಾರದವರು ಉಪಾಯಗಳನ್ನು ಕೈಕೊಳ್ಳುತಿದ್ದಾರೆಂಬ ಅಪ್ಪಣೆ ಕೊಡಿಸಿದರಿಂದ ಅಂದಿನ ಗಲಭೆಯು ನಿವಾರಣೆಯಾಗಿ ಜನತೆಗೆ ಸ್ವಲ್ಪ ಮನಃಶಾಂತಿಯು ಲಭಿಸಿತು. ಆದರೆ ಕಾನೂನು ಮೇರೆಗೆ ಬೇಂಕಿನ ಆಡಳಿತೆಯವರು ತಾವಾಗಿ ಒಪ್ಪದ ಹೊರತು ಅಂತಹದೊಂದು ಲೆಕ್ಕ ವಿಮರ್ಶೆಯು ಸಾಧ್ಯವಿದ್ದಿಲ್ಲ. ಹಾಗಾಗಿ ಅಂದಿನ ಬೇಂಕುಗಳ ಗಿರಾಕಿ ವರ್ಗದವರ ಮನೋಚಾಂಚಲ್ಯವನ್ನು ಹೋಗಲಾಡಿಸಿ ಶಾಂತಿ ನಿರ್ಮಾಣ ಉಂಟಾಗಬೇಕಾದರೆ ಬೇಂಕುಗಳು ತಾವಾಗಿಯೇ ರಿಜರ್ವ್ ಬೇಂಕಿನವರಿಂದ ಲೆಕ್ಕ ಪರೀಕ್ಷೆಯನ್ನು ಮಾಡಿಸಲಿಕ್ಕೆ ಮುಂದೊತ್ತಬೇಕೆಂಬುದೇ ಮಾನ್ಯ ಪ್ರಧಾನರ ಹೇಳಿಕೆಯ ಗೂಢಾರ್ಥ. ಅದರಂತೆ ಕೆನರಾ ಬೇಂಕಿನವರು ತಮ್ಮ ಯಾವತ್ತು ಲೆಕ್ಕಪತ್ರಗಳನ್ನೂ ಪುಸ್ತಕಗಳನ್ನೂ ರಿಜರ್ವ್ ಬೇಂಕಿನ ಯಾವನೊಬ್ಬ ಹುದ್ದೇದಾರನಿಂದ ಪರಿಶೋಧನೆ ನಡಿಸುವಂತೆ ತಾವಾಗಿಯೇ ರಿಜರ್ವ್ ಬೇಂಕಿನ ಗವರ್ನರರಿಗೆ ತಂತಿ ಕೊಟ್ಟರು. ಈ ಕುರಿತು ನಮ್ಮೂರಿನ "ಕಂಠೀರವವು" ತನ್ನ ಅಮೂಲ್ಯ ಪತ್ರಿಕೆಯಲ್ಲಿ ಅಂದು ಈ ರೀತಿ ಉಲ್ಲೇಖಿಸಿದೆ. "ಇದೊಂದು ಈ ಬೇಂಕಿನ ಅಭೇದ್ಯವಾದ ಸುಭದ್ರ ಪರಿಸ್ಥಿತಿಯ ನಿಶ್ಚಿತ ಲಕ್ಷಣವೆಂದಷ್ಟೇ ಅಲ್ಲ; ಈ ಸಂಸ್ಥೆಯ ಎನಿಯೋಗಗಳು "ಎಕ್ಸ್‌ಪರ್ಟರ" ಎಂತಹ ಕಠಿನ ಕ್ರಮದ ಪರಿಶೋಧನೆಗಾದರೂ ಒಳಗಾಗಬಲ್ಲುದು. ರಿಜರ್ವ್ ಬೇಂಕು ಆಸ್ಪದಿಸಬಹುದಾದ ಎಂತಹ ಗಡುಸಾದ ನಿಯಮಾವಳಿಗಳ ಪರೀಕ್ಷೆಗಾದರೂ ಅದು ಸಿದ್ಧವಾಗಿ ನಿಂತಿರುವುದು ಎಂಬ ದೃಢ ವಿಶ್ವಾಸವು ಈ ಸಂಸ್ಥೆಯ ಆಡಳಿತದ ಮುಂದಲಕ್ಕೆ ಸಂಪೂರ್ಣವಾಗಿ ಇದೆ ಎಂದೂ ಇದರಿಂದಲೇ ಸ್ಪಷ್ಟವಾಗುವುದು."

ಆ ತರುವಾಯ—೧೯೩೮ರಲ್ಲಿ ರಿಜರ್ವ್ ಬೇಂಕಿನ ಒಬ್ಬ ಲೆಖ್ಖಿ ಪರಿಶೋಧಕರು ನಡೆಸಿದ ಲೆಕ್ಕ ಪರೀಕ್ಷೆಯ ಫಲಿತಾಂಶವಾಗಿ, ಈ ಬಿಕ್ಕಟ್ಟಿನಿಂದ ಈ ಬೇಂಕು ಜಯಶೀಲವಾಗಿ ಹೊರಬಿದ್ದು, ಇಂದಿಗೂ ಅದರ ಪೋಷಕ ವರ್ಗದವರ ಸೇವೆಯನ್ನು ನಿಶ್ಚಿಂತತೆಯಿಂದ ಸಲ್ಲಿಸುತ್ತದೆ.

ಕಗ್ಗತ್ತಲಿನ ಹಿಂದೆಯೇ ಶುಭ್ರ ಪ್ರಭಾತವೆಂಬ ನಾನ್ನುಡಿಯಂತೆ ಈ ಸಂದಿಗ್ಧ ಪರಿಸ್ಥಿತಿಯ ಹಿಂದೆಯೇ ಜನತೆಯ ಆಧಾರ ಸನ್ಮಾನ ಲಕ್ಷಣವಾಗಿ ಈ ಬೇಂಕಿನ ಠೇವಣಿಗಳು ಮತ್ತಷ್ಟು ಹೆಚ್ಚಿದವು. ಇಂದಿಗೆ ಈ ಸಂಖ್ಯೆಯು ರೂಪ್ಯಾ ೯೯ ಲಕ್ಷಕ್ಕೆ ಮಿಕ್ಕಿದೆ. ಇಂತಹ ಪರಿಸ್ಥಿತಿಯಿಂದ ಈ ಬೇಂಕಿನ ಪ್ರಾಚೀನ ಸಂಪ್ರದಾಯದ "ಸುಭದ್ರತೆಯೇ ಪ್ರಥಮ ಧ್ಯೇಯ"ವೆಂಬ ಕಾರ್ಯನೀತಿಗೆ ಲೋಪ ಬಾರದಂತೆ ಠೇವಣಿಗರ ಹಣಗಳನ್ನು ಮತ್ತಷ್ಟು ಭದ್ರಪಡಿಸಬೇಕಾದುದರಿಂದ ಈಗ ತನ್ನ ಅಧಿಕೃತ ಮೂಲಧನವನ್ನು ೧೦ ಲಕ್ಷದಿಂದ ೫೫ ಲಕ್ಷಕ್ಕೆ ಏರಿಸಲುದ್ಯುಕ್ತವಾಗಿದೆ.

ಅಂದಿನ ಈ ಚಿಕ್ಕ ಕಾಳು ಇಂದಿನ ಮಹಾ ವೃಕ್ಷವಾಗಿ ಚಿಗುರಿ, ಬೆಳೆದುದು ಪ್ರಾಮಾಣಿಕತೆಯ ಮತ್ತು ಕಾರ್ಯಕುಶಲತೆಯ ಪರಿಣಾಮವಲ್ಲದೆ ಮತ್ತೇನು?

ಹಗಲನ್ನು ರಾತ್ರಿಯು ಹಿಂಬಾಲಿಸುವಂತೆ, ಅತಿವ್ಯಯವನ್ನು ಅತಿಭಯವು ಬೆನ್ನಟ್ಟುವುದು.

* * * *

ಲಕ್ಷ್ಮಿಯು ಚಂಚಲೆ. ಆದುದರಿಂದಲೇ ನಿನ್ನೆ ನಿಮ್ಮಲ್ಲಿಗೆ ಬರಲು ಒಪ್ಪದವಳು ಇಂದು ಬರಬಹುದು.

* * * *

ಶಕ್ತಿಯಿಂದಾರಿ ವ್ಯಯಿಸಿ ಜೀವಿಸುವೆನೆಂಬುದರಿಂದ ಮನುಷ್ಯನ ಪ್ರತಿಷ್ಠೆ ಹೆಚ್ಚುವುದಿಲ್ಲ.

* * * *

ಹಣ ಉಳಿಸಬೇಕು ಎಂದು ಸದಾ ಆಲೋಚನೆ ಮಾಡುತ್ತಲೇ ಇರಬೇಡ-ಆದನ್ನಾರಂಭಿಸು.

* * * *

ಮನುಷ್ಯನು ಆಡಿದುದರ ದಾಖಲೆಗಿಂತ ಮಾಡಿದುದರ ದಾಖಲೆ ದೊಡ್ಡದು.

* * * *

ಕಳೆದ ವರುಷದ ನಿಮ್ಮ ಗಿರಾಕಿಯು ಈಗಲೂ ನಿಮ್ಮೊಂದಿಗೆ ತೃಪ್ತಿಯಿಂದಿರುವನೇ?

* * * *

ಹಣವಿದ್ದರೆ ಗೆಳೆಯ-ಹಣ ಹೋದರೆ ಹಳೆಯಾ.

ಹಣವುಳಿಸುವುದು ಶ್ರೇಷ್ಠ. ಕಲೆ.
ಹಣ ಬೆಳಿಸುವುದು ಸರ್ವಶ್ರೇಷ್ಠ. ಕಲೆ.
ನಿಮ್ಮ ಹಣವನ್ನು ನಿಮ್ಮ ಭರವಸೆಯ ಬ್ಯಾಂಕಿನಲ್ಲಿರಿಸಿ,
ಅದು ಬೆಳೆದು ಬರುವುದನ್ನು ನೋಡುತ್ತಿರಿ.

ಕೆನರಾ ಬ್ಯಾಂಕ್, ಲಿಮಿಟೆಡ್.
ಸ್ಥಾಪನೆ: 1906.

CANARA BANK SUPPLEMENT

'ಬ್ಯಾಂಕಿಂಗ್' ಹೇಗೆ ಹುಟ್ಟಿತು?

'ಬ್ಯಾಂಕಿಂಗಿ'ನ ಮೂಲ ಸ್ವರೂಪ! ಅದು ಬೆಳೆದು ಬಂದ ರೀತಿ! ಅಕ್ಕಸಾಲಿಗರಿಂದ ಜನಿಸಿದ ವೃತ್ತಿ!

By: Sri. B. V. Baliga, M. A.

['ಬ್ಯಾಂಕಿಂಗ್' ವ್ಯವಹಾರವನ್ನು ಕುಸೀದ ವೃತ್ತಿಯೆನ್ನುತ್ತೇವೆ. ಆದರೆ 'ಕುಸೀದ'ವೆಂಬ ಹೆಸರನ್ನು ಹೆಚ್ಚಿನವರು ಅರಿಯರು. 'ಬೇಂಕು' ಮತ್ತು 'ಬ್ಯಾಂಕಿಂಗ್' ಎಂಬೀ ಶಬ್ದಗಳು ಹೆಚ್ಚಾಗಿ ರೂಢಿಯಲ್ಲಿವೆ. ಈ ಲೇಖನದಲ್ಲಿ 'ಬ್ಯಾಂಕಿಂಗ್' ವ್ಯವಹಾರದ ಆರಂಭವು ಹೇಗಾಯಿತೆಂದು ವಿವರಿಸಲಾಗಿದೆ.]

'ಕುಸೀದ' ಎಂದರೆ ಬೇಂಕ್ ವ್ಯವಹಾರ. "ಬೇಂಕುಗಳಲ್ಲಿ ಯೋಗ್ಯ ಜವಾಬ್ದಾರಿ ಕೊಟ್ಟು ಹಣವನ್ನು ಸಾಲವಾಗಿ ಪಡೆಯ ಬಹುದು. ನಮ್ಮಲ್ಲಿಯ ಹಣವನ್ನು ಭದ್ರವಾಗಿಟ್ಟು ಬಡ್ಡಿ ದೊರಕಿಸಿಕೊಳ್ಳ ಬಹುದು"—ಎಂಬು ಸಾಮಾನ್ಯವಾಗಿ ಎಲ್ಲರಿಗೆ ತಿಳಿದಿದೆ. ತೆರುವುದು, ತರುವುದು, ಕೊಳ್ಳುವುದು, ಕೊಡುವುದು ಅರ್ಥಾತ್ ಹಣದ ಕೈಯಿಂದ ಕೈಬದಲಾವಣೆಯು ಸುಲಭವಾಗುವ ರೀತಿಯಲ್ಲಿ ಬೇಂಕುಗಳು ಸಹಕಾರಿಯಾಗುವುವು. ಈ ಬೇಂಕು ವ್ಯವಹಾರವೆಂದರೇನೆಂದು ನೋಡೋಣ.

ಮೊತ್ತಮೊದಲು ಈ ಕುಸೀದ ವೃತ್ತಿಯು ಅಕ್ಕಸಾಲಿಗರಿಂದ ಹುಟ್ಟಿತು. ಬಂಗಾರದ ಕೆಲಸದವರಾಗಿ ಯಾವಾಗಲೂ ಹೆರರ ನಗನಾಣ್ಯಗಳನ್ನು ಭದ್ರವಾಗಿಟ್ಟುಕೊಳ್ಳುವ ಜವಾಬ್ದಾರಿಯರಿತು ತಮ್ಮ ಪ್ರಾಮಾಣಿಕತನಕ್ಕೆ ಕುಂದುಬಾರದಂತೆ ವರ್ತಿಸುತ್ತಿದ್ದ ಇವರಲ್ಲಿ ಭದ್ರತೆಗಾಗಿ ನಾಗರಿಕರು ತಮ್ಮ ಹಣಕಾಸುಗಳನ್ನು ಇರಿಸುವ ರೂಢಿ ಪೂರ್ವದಲ್ಲಿತ್ತು. ಹಾಗೆ ಅಕ್ಕಸಾಲಿಗನಲ್ಲಿ ಹಣವಿಟ್ಟ ಠೇವಣಾತಿದಾರನು ಇನ್ನೊಬ್ಬನಿಗೆ ಸಲಿಸುವ ಸಾಲವಿದ್ದರೆ, ಆ ಅಕ್ಕಸಾಲಿಯಿಂದ ಪಡೆದು ತೆರುವುದೂ, ಸಾಲಿಗನು ಪುನಃ ಆ ಹಣವನ್ನು ಅದೇ ಅಕ್ಕಸಾಲಿಯಲ್ಲಿ ತನ್ನ ಹೆಸರಲ್ಲಿ ಇಡುವುದೂ ಬಳಕೆಯಲ್ಲಿತ್ತು. ಈ ರೀತಿಯು ಬರಬರುತ್ತಾ ಸುಧಾರಣೆಗೊಂಡು, ಅಕ್ಕಸಾಲಿಯ ಮೇಲಿನ ವಿಶ್ವಾಸವು ಹೆಚ್ಚಿ, ಆತನ 'ಕೈಚೀಟಿಗೆ' ಹಣದ ಯೋಗ್ಯತೆ ಬರುವಂತಾಯಿತು. ಅಂದರೆ ರಾಮನ ಹಣವು ತನ್ನಲ್ಲಿದೆಯೆಂದು ಅಕ್ಕಸಾಲಿಯು ಬರವಣಿಗೆಯಲ್ಲಿ ಕೊಟ್ಟರೆ, ಆ ಚೀಟಿಯ ಆಧಾರದಿಂದ ರಾಮನು ಗೋವಿಂದನಿಂದ ಚೀಟಿಯಲ್ಲಿ ಕಾಣಿಸಿದಷ್ಟು ಹಣವನ್ನು ಸರಾಗವಾಗಿ ಪಡೆಯುವಂತಾಗುವ ವ್ಯವಸ್ಥೆಯಾಯಿತು. ಹಾಗೆ ರಾಮನ ಲೆಕ್ಕದಲ್ಲಿ ಅಕ್ಕಸಾಲಿಯಲ್ಲಿದ್ದ ಹಣವು ಗೋವಿಂದನ ಹೆಸರಿಗೆ ಬದಲಾಯಿಸಲು ಬರುವ ಈ "ವಜಾ-ಜಮಾ" ಪದ್ಧತಿಯಿಂದಾಗಿ ಹಣವನ್ನು ನೋಡದೆ ಹಣದ ಕೈಬದಲಾವಣೆಯು ವ್ಯವಹಾರದಲ್ಲಿ ಬಂತು.

"ನೋಟು"

ಇದರ ಪ್ರಥಮಾವತಾರ

ಒಬ್ಬ ಧನಿಕನು ಲಕ್ಷಗಟ್ಟಲೆಯಲ್ಲಿ ಭದ್ರವಾಗಿರಿಸಿದ ಹಣವಿರಬಹುದು. ಒಂದು ವೇಳೆ ಅವನಿಗೆ ಅದರಿಂದ ಕೆಲವು ನೂರುಗಟ್ಟಲೆ-ಯಾ-ಹತ್ತುಗಟ್ಟಲೆ ಹಣವನ್ನು ಬೇರೆಯವರಿಗೆ ತೆರುವ ಅಗತ್ಯ ಒದಗಬಹುದು. ಅಂತಹ ಸಂದರ್ಭದಲ್ಲಿ ಧನಿಕನ ಹೆಸರಲ್ಲಿ ತನ್ನಲ್ಲಿರುವ ಹಣದ ಪೂರ್ಣ ಮೌಲ್ಯವನ್ನು ಕಾಣಿಸಿದ ಚೀಟಿಯನ್ನು ಅಕ್ಕಸಾಲಿಯು ಕೊಡುವ ಅವಶ್ಯಕತೆಯಿಲ್ಲ. ನೂರಕ್ಕೆ ಹತ್ತು ಹತ್ತರ ಹತ್ತು ಚೀಟುಗಳನ್ನು ತೆರುವುದೆಂದು ಗೊತ್ತಾಯಿತು. ಇದೇ ಮೊತ್ತಮೊದಲಿನ 'ನೋಟಿ'ನ ರೂಪ.

ಕೆಲಕಾಲದ ನಂತರ ಈ ನೋಟುಯಾನೆ ಕೈಚೀಟುಗಳ ಸ್ಥಾನದಲ್ಲಿ ಚಕ್ಕುಗಳು ಬಂದುವು.

ವ್ಯವಹಾರದ ಬೆಳೆವಣಿಗೆ

ಅಕ್ಕಸಾಲಿಗಳ ಯಾ ಖಾಸಗಿ "ಬೇಂಕರುಗಳ" ಮೇಲಿನ ಭರವಸೆಯು ಬೆಳೆಯಿತು. ಇವರಿಂದಾಗಿ ದುಡ್ಡಿನ ಅದಲು ಬದಲಾವಣೆಯು ಸುಲಭವಾಯಿತೆನ್ನಬಹುದು. ಹೀಗೆ ಭದ್ರತೆಗಾಗಿ ತಮ್ಮಲ್ಲಿರಿಸಲ್ಪಟ್ಟ ಹಣದಿಂದ, ಠೇವಣಾತಿದಾರರ ಹೆಸರಲ್ಲಿ ಹೊರ ತೆರುವುದು ಕಡಿಮೆಯಾಗಿ, ಬೇಂಕರನ ಕೈಯಲ್ಲಿ ಯಾವಾಗಲೂ ತುಂಬ ನಿಧಿ ಉಳಿಯುತ್ತಿತ್ತು. ಈ ಉಳಿತಾಯ ಉಪಯೋಗವಿಲ್ಲದುದರಿಂದ ಅದನ್ನು ಇನ್ನೂ ಭದ್ರವಾದ ಖಜಾನೆಯಲ್ಲಿ ಬೀಗ ಮುದ್ರೆಯೊಳಗಿಡಿಸಬರುತ್ತಿತ್ತು. ಇದಲ್ಲದೆ ಬೇರೆಯವರು ಯೋಗ್ಯ ಒತ್ತೆಯಿಟ್ಟು ಇವರಿಂದ ಹಣ ಸಾಲಪಡೆವುದೂ ಮೊದಲಾಯಿತು. ಸುಮ್ಮನೆ ಖಜಾನೆಯಲ್ಲಿ ಕಿಲುಬು ಹಿಡಿವ ಬದಲು ಯೋಗ್ಯ ಜವಾಬ್ದಾರಿಯ ಮೇಲೆ ಸಾಲಕೊಡುವುದು ಹಿತವೆಂದೂ, ಹಾಗೆ ಉಪಯೋಗಕ್ಕೆ ಅಡಚಣೆಯ ವೇಳೆ ತೆತ್ತ ಸಾಲಕ್ಕೆ ಬಡ್ಡಿ ಗಳಿಸುವುದು ಲಾಭಕರವೆಂದೂ, "ಬೇಂಕರ್" ಯಾನೆ ಅಕ್ಕಸಾಲಿಯು ಕಂಡುಕೊಂಡನು. ಭದ್ರತೆಗಾಗಿ ತನ್ನ ಖಜಾನೆಯಲ್ಲಿರಿಸಿದ ಧನಿಕನು ಇದಕ್ಕೆ ಒಕ್ಕೈಪಪೆತ್ತಾನೆ? ಅವನ ಹಣದ ಮೇಲೆ ಇವನು ಲಾಭಗಳಿಸುವುದನ್ನು ಅವನು ಸಹಿಸುವನೆ? ಅದಕ್ಕಾಗಿ, ತನ್ನ ದ್ರವ್ಯವನ್ನು ಕಾಯ್ದುಕೊಳ್ಳುವುದಕ್ಕಾಗಿ ಧನಿಕನು ಅಕ್ಕಸಾಲಿಗೆ ಕೊಡಲಿರುವ ಬಾಡಿಗೆಯನ್ನು ಅಕ್ಕಸಾಲಿ ಮಾಫಿ ಬಿಟ್ಟನು. ಮಾತ್ರವಲ್ಲ, ಧನಿಕನ ಭಂಡವಾಳಕ್ಕೆ ಬಡ್ಡಿಯನ್ನು ತೆರುವುದೆಂದು ಗೊತ್ತಾಯಿತು. ಹೀಗೆ ಕುಸೀದ ವ್ಯವಹಾರವು ಹುಟ್ಟಿತು.

ಕುಸೀದ ಪದ್ಧತಿಯು ಇಷ್ಟರಲ್ಲೇ ನಿಲ್ಲಲಿಲ್ಲ. ಬರಬರುತ್ತ ತುಂಬ ಬದಲಾವಣೆಗಳಾದುವು. ಒಂದು ಪಟ್ಟಣದಲ್ಲಿ ಹತ್ತು ಜನರ ಬಂಡವಾಳವಿರುವ ಒಂದು ಚಿಕ್ಕ ಬೇಂಕು ಇದೆಯೆನ್ನಿ. ಆ ಹತ್ತು ಜನರ ದುಡ್ಡು ಒಂದೇ ಬೇಂಕಿನಲ್ಲಿರುವುದರಿಂದಾಗಿ, ಆದರೊಳಗೆ ಒಬ್ಬನು ಮತ್ತೊಬ್ಬನಿಗೆ ಕೊಂಡ ಸಾಲವನ್ನು ಪಾವತಿಕೊಡಲು ಏನೂ ಕಷ್ಟವಿಲ್ಲ. ಸಲ್ಲತಕ್ಕ ಹಣಕ್ಕೆ ಒಂದು ಅಧಿಕಾರ ಪತ್ರವನ್ನು ಬರಾಯಿಸಿಕೊಟ್ಟರಾಯಿತು. ಅದನ್ನು ಬೇಂಕಿಗೆ ಕೊಟ್ಟಲ್ಲಿ ಸಾಲಗಾರನ ಲೆಕ್ಕದಿಂದ ಪತ್ರದಲ್ಲಿ ಕಾಣಿಸಿದಷ್ಟು ಹಣವು "ವಜಾ" ಆಗಿ, ಸಾಲಿಗನ ಹೆಸರಲ್ಲಿ "ಜಮಾ" ಕಟ್ಟಿಕೊಳ್ಳಲಾಗುವುದು.

ಒಂದೇ ಬೇಂಕಿನಲ್ಲಿ ಹಣವಿಟ್ಟವರ ವ್ಯವಹಾರವು ಇದಾಯಿತು. ಒಂದರ ಬದಲು ಬೇರೆ ಬೇರೆ ಬೇಂಕುಗಳಲ್ಲಿ ಲೆಕ್ಕವಿರುವ ಬಂಡವಾಳಗಾರರೊಳಗಿನ ವ್ಯವಹಾರವು ಹೇಗೆ ನಡೆಸಲ್ಪಡುವುದೆಂದು ನೋಡೋಣ!

ಒಂದು ಊರಲ್ಲಿ ಎರಡು ಬೇಂಕುಗಳಿವೆಯೆಂದು ತಿಳಿಯುವ. ಒಂದು ಬೇಂಕಿನ ಗಿರಾಕಿಯು ಮತ್ತೊಂದು ಬೇಂಕಿನ ಗಿರಾಕಿಗೆ ಹಣ ಸಲ್ಲಿಸಬೇಕೆಂದು ತಿಳಿಯಿರಿ. ಆಗ ವ್ಯವಹಾರವೆಂತು ನಡೆವುದು? ಮೊದ್ದಲನೆ ಗಿರಾಕಿ, ತನ್ನ ಬೇಂಕಿನಿಂದ ಪಡೆವಂತೆ ಎರಡನೆ ಬೇಂಕಿನ ಗಿರಾಕಿಗೆ ಭೇಟಿಕೊಡುವನು. ಆ ಭೇಟಿಯನ್ನು ಅವನು ತನ್ನ ಬೇಂಕಿನಲ್ಲಿ "ಹಾಜರು" ಪಡಿಸುವನು. ದಿನದ ಕೆಲಸ ಮುಗಿದೊಡನೆಯೇ ಅಥವಾ ನಿಶ್ಚಿತ ಸಮಯದಲ್ಲಿ ಆ ಎರಡು ಬೇಂಕುಗಳ ಅಧಿಕಾರಿಗಳು ಒಟ್ಟು ಸೇರಿ, ಅತ್ತಣಿಂದಿತ್ತ, ಇತ್ತಣಿಂದತ್ತ ಪರ್ಗಾವರ್ಗಿಯಾದ ಹಣದ ಲೆಕ್ಕ ತೆಗೆದು ಯಾರಿಗೆ ಯಾರು ಎಷ್ಟು ಕೊಡಬೇಕೆಂಬುದನ್ನು ನೋಡಿ ಅದನ್ನು ನಗದಾಗಿ ಜಮಾ ಪಡೆಯುವರು. ಹಾಗೆ ಕೊಟ್ಟ ಚೀಟಿಗೆ 'ಚಕ್' ಎನ್ನುತ್ತಾರೆ. "ನಗದಾಗಿ" ಕೊಡುವುದರ ಬದಲು ಪರಸ್ಪರ ಸಾಲವನ್ನು ತಮ್ಮಿಬ್ಬರ ಜವಾಬ್ದಾರಿ ಠೇವಣಾತಿಯಿರುವ ಸರಕಾರದ ಕೇಶ್ ಅಥವಾ ಸರಕಾರದ ಬೇಂಕಿನಿಂದ ಪಡೆವಂತೆ ಅಧಿಕಾರ ಪತ್ರ ವಿನಿಮಯ ನಡೆಸುವುದು ಕೂಡಾ ಇದೆ.

ಬೇಂಕಿನ ಕಾರ್ಯಕಲಾಪಗಳು

ಸಾಲ ಪಡೆವುದು—ಸಾಲ ಕೊಡುವುದು—ಇದಕ್ಕಾಗಿ ಇರುವ ಸಂಸ್ಥೆಯೇ ಬೇಂಕು ಎಂದು ಹೇಳಬಹುದು.

ಚಾಲ್ತಿ ಠೇವಣಾತಿಯ ಭದ್ರತೆ:— ನಮ್ಮಲ್ಲಿರುವ ಹಣವು ಸುರಕ್ಷಿತವಾಗಿರುವಂತೆ ನಾವು ಬೇಂಕಿನಲ್ಲಿಡಬಹುದು. ಅದನ್ನು ನಾವು ಕೇಳಿದಾಗ್ಗೆ ಕೊಡಬೇಕೆಂಬ ಶರ್ತವನ್ನು ಬೇಂಕು ಒಪ್ಪಿಕೊಳ್ಳುವಂತೆ ಮಾಡಬಹುದು. ಆದರೆ ಅಂತಹ ನಮ್ಮ ಹಣಕ್ಕೆ ಹೆಚ್ಚಿನ ಬಡ್ಡಿ ಬಾರದು.

ನಿರಖು ಠೇವಣಾತಿ:— ಇಂತಿಷ್ಟು ಸಮಯದ ವರೆಗೆ ಹಣವು ನಿಮ್ಮಲ್ಲಿರಲಿ ಎಂದು ಒಪ್ಪಿಸಿಕೊಟ್ಟರೆ ಅದಕ್ಕೆ ನಿರಖು ಯಾ ವಾಯಿದೆಯ ಠೇವಣಾತಿಯೆನ್ನುತ್ತೇವೆ. ಇವಕ್ಕೆ ಚಾಲ್ತಿ ಠೇವಣಾತಿಗಿಂತ ಹೆಚ್ಚಿನ ಬಡ್ಡಿಯಿದೆ.

ಸಾಲ ತೆರುವುದು:—ಜನರಿಂದ ಠೇವಣಾತಿಯಾಗಿ ಪಡೆದ ಹಣವನ್ನು ಬೇಂಕು, ಇತರರಿಗೆ ಸಾಲವಾಗಿ ಕೊಟ್ಟು ತಾನೂ ಬಡ್ಡಿಗಳಿಸುವುದು. ತಕ್ಕ ಭರವಸೆಯ ಮೇಲೆ ಸಾಲ ಕೊಡುವುದು. ಸಾಲಗಾರರು ತಾವು ಒಪ್ಪಿಸುವ ಜವಾಬ್ದಾರಿ ಮೊದಲಾದುದರ ವಿವರ ತಿಳಿಸಿ, ಬೇಂಕಿಗೆ ಅರ್ಜಿ ಮಾಡುವುದು. ಈ ಅರ್ಜಿಗಳನ್ನು ಮೇಲ್ವಿಚಾರಕರು ಪರಿಶೀಲಿಸಿ ಯುಕ್ತ ಕಂಡರೆ ಸಾಲ ಕೊಡುವರು.

ವಿನಿಮಯ ಪತ್ರ ವಟಾಯಿಸುವುದು:—ಒಬ್ಬ ವ್ಯಾಪಾರಿಯು ಇನ್ನೊಬ್ಬನಿಗೆ ಕಳಿಸಿದ ಸಾಮಾನುಗಳ ಮೌಲ್ಯದಷ್ಟನ್ನು, ಸಾಮಾನು ಪಡಕೊಂಡವನು ನಿಶ್ಚಿತ ಅವಧಿಯೊಳಗಾಗಿ ಬಡ್ಡಿ ಕೂಡಿಸಿ ಕೊಡುವ ಶರ್ತದ ಮೇಲೆ ಸಾಮಾನನ್ನು ಕಳುಹಿಸಿದವನಿಗೆ ತೆರುವುದು. ಆದರೆ ಹೀಗೆ ಹಣ ಮುಂಗಡವಾಗಿ ಒದಗಿಸಿ ಕೊಟ್ಟದ್ದಕ್ಕಾಗಿ ಬೇಂಕಿನ ದುಡಿತವನ್ನು ಅದು ವಸೂಲು ಮಾಡುವುದು. ನಿಶ್ಚಿತ ಅವಧಿಯೊಳಗೆ ಯಾರ ಪರವಾಗಿ ಹಣವು ಕೊಡಲಾಗಿದೆಯೋ ಅವನು ತಪ್ಪಿದರೆ ಆ ಹಣವು ಯಾರಿಗೆ ಬೇಂಕಿನಿಂದ ಸಂದಿದೆಯೋ ಆತನಿಂದ ವಸೂಲು ಮಾಡಲಾಗುವುದು.

ಭಂಡವಾಳಗಾರರ ಪರವಾಗಿ ಹಣ ಸಾಲಕೊಟ್ಟು ಬಡ್ಡಿ ಹುಟ್ಟಿಸುವ ಜವಾಬ್ದಾರಿಯೂ ಬೇಂಕಿನದಿದೆ. ಪಾಲು ಭಂಡವಾಳವನ್ನು ಭದ್ರತೆ ನೋಡಿ ಹೊರಗೆ ಬಡ್ಡಿಗೆ ನಡೆಸಿ, ಪಾಲು ಭಂಡವಾಳದಾರರಿಗೆ ಲಾಭಗಳಿಸಿಕೊಡುವಲ್ಲಿ ಬೇಂಕಿನ ಕರ್ತವ್ಯವು ತುಂಬ ಇದೆ. ಇದಲ್ಲದೆ ಸಾರ್ವಜನಿಕರ ಆಭರಣ, ಹಣಗಳ ಭದ್ರತೆ, ಸಾರ್ವಜನಿಕರಲ್ಲಿರಬಹುದಾದ ದವಸಗಳ, ಕೈಗಾರಿಕೆಯ ಸಂಸ್ಥೆಗಳ ಪಾಲುಗಳ ಅಡಮಾನದ ಮೇಲೆಯೂ ಕೊಂಡುಕೊಳ್ಳುವುದರಿಂದ ಹಣ ತೆರುವುದೇ ಮೊದಲಾದುವು ಬೇಂಕಿನ ವ್ಯವಹಾರದಲ್ಲಿ ಕೆಲವು.

ಜನತೆಯ ಭರವಸೆ!

ಕೆನರಾ ಬ್ಯಾಂಕು ಕಳೆದ ಮೂವತ್ತೈದು ವರ್ಷಗಳಿಂದ ತನ್ನ ಅವಿರಾಮವಾದ ಸೇವೆ ಸಲಿಸಿ, ಜನತೆಯ ಅದರ ಭರವಸೆಗಳನ್ನು ಗಳಿಸಿಕೊಂಡಿದೆ.

ಯೋಗ್ಯ ಸೇವೆಯು ಮಾತ್ರ ಯೋಗ್ಯ ಪುರಸ್ಕಾರವನ್ನು ಪಡೆವುದು. ಕೆನರಾ ಬ್ಯಾಂಕು ಇಂದು ಜಿಲ್ಲೆಯ ಬಲಾಢ್ಯ ಬ್ಯಾಂಕು ಎನಿಸಲು ಜನತೆಯ ಪ್ರೇಮಾದರಗಳು ಕಾರಣವಾಗಿವೆ. ಬ್ಯಾಂಕಿನ ಅವ್ಯಾಹತವಾದ ಸೇವೆಯು ಜನತೆಯಿಂದ ಈ ಬಹುಮಾನ ಪಡೆದಿದೆ.

ಕೆನರಾ ಬ್ಯಾಂಕ್, ಲಿಮಿಟೆಡ್.
ಸ್ಥಾಪನೆ: 1906.